
# ನಿರೀಕ್ಷೆಯನು

# ಕಳೆದುಕೊಳ್ಳಬೇಡ



ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜುಲೈ 2007

ಕನ್ನಡಕ್ಕೆ ಭಾಷಾಂತರಿಸಿದವರು: ಜೆ.ಹೆಚ್. ರೋಹಿಣಿ
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Don't Lose Hope)

# ನಿರೀಕ್ಷೆಯನು ಕಳೆದುಕೊಳ್ಳಬೇಡ

ಆಶಿಷ್ ರಾಯ್‌ಚೂರ್

## ವಿಷಯಸೂಚಿ


| | | |
|---|---|---|
| 1. | ಜೀವನ ಯಾವಾಗಲೂ ಸುಲಭವಲ್ಲ | 1 |
| 2. | ನಿರೀಕ್ಷೆ - ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಬಹಳ ಮುಖ್ಯವಾದ ಭಾಗ | 3 |
| 3. | ನಿರೀಕ್ಷೆಯ ಮುಖ್ಯತ್ವ | 5 |
| 4. | ನಿರಾಶೆಯ ಸ್ಥಿತಿಯನ್ನು ಬದಲಾಯಿಸುವ ದೇವರು | 8 |
| 5. | ನಿರಾಶೆಯ ಸ್ಥಿತಿಯಲ್ಲಿ ನಿರೀಕ್ಷೆಗೆ ಇರಬೇಕಾದ ತಳಹದಿ | 13 |
| 6. | ನಿರಾಶೆಯ ಪರಿಸ್ಥಿತಿಗಳ ಮಧ್ಯದಲ್ಲಿ ನಾನೇನು ಮಾಡಲಿ? | 18 |

# 1
# ಜೀವನ ಯಾವಾಗಲೂ ಸುಲಭವಲ್ಲ

ನಾವೆಲ್ಲರೂ ಜೀವನ ಯಾತ್ರೆಯನ್ನು ಅನೇಕ ಕನಸು, ಗುರಿ, ಮಹತ್ವಾಕಾಂಕ್ಷೆ ಮತ್ತು ಹೆಬ್ಬಯಕೆಯಿಂದ ಪ್ರಾರಂಭಿಸುತ್ತೇವೆ. ದೊಡ್ಡ ತಿಳುವಳಿಕೆಯ ಉದ್ರೇಕದಿಂದ, ನಾವು ಏನು ಮಾಡಬೇಕು, ನಾವು ಎಲ್ಲಿಗೆ ಹೋಗಲು ಇಷ್ಟಪಡುತ್ತೇವೆ ಮತ್ತು ಜೀವನದಲ್ಲಿ ನಾವು ಏನಾಗಬೇಕು ಎಂಬ ಯೋಚನೆಗಳನ್ನು ನಾವು ಮಾಡುತ್ತೇವೆ. ಆದರೆ ಜೀವನದುದ್ದದ ಎಲ್ಲೋ ಒಂದು ಕಡೆ, ಖಂಡಿತವಾಗಿ ನಾವು ಬಿರುಗಾಳಿಯ ವಾತಾವರಣದೊಳಗೆ ಓಡುತ್ತೇವೆ. ಜೀವನ ಯಾವಾಗಲೂ ಸುಲಭವಲ್ಲ. ಜೀವನ ಒಂದು ಕಥೆ ಪುಸ್ತಕದ ಹಾಗೆ ಸರಳವಾಗಿರಬೇಕೆಂದು ನಾವು ಆಗಾಗ್ಗೆ ಇಷ್ಟಪಡುತ್ತೇವೆ, ಆದರೆ ಅದು ಯಾವಾಗಲೂ ಹಾಗೆ ಆಗುವುದಿಲ್ಲ! ಅನಿರೀಕ್ಷಿತ ಸವಾಲುಗಳು, ಕಷ್ಟಗಳು ಮತ್ತು ಪರಿಸ್ಥಿತಿಗಳು ದಾರಿಯುದ್ದಕ್ಕೂ ಎದ್ದು ಕಾಣುತ್ತವೆ ಅಥವಾ ಹುಟ್ಟಿಕೊಳ್ಳುತ್ತವೆ. ಅಂತಹ ಸಮಯದಲ್ಲಿ ನಮ್ಮ ಗುರಿ ಮತ್ತು ಕನಸುಗಳು ಜಾರಿ ಹೋಗುವ ಹಾಗೆ ಕಾಣುತ್ತದೆ. ಕೆಲವು ಸಲ, ನಿರೀಕ್ಷೆಯೇ ಇಲ್ಲ ಎನ್ನುವ ಪರಿಸ್ಥಿತಿಯ ಮಧ್ಯದಲ್ಲಿ ನಾವು ಇರುವುದನ್ನು ನೋಡುತ್ತೇವೆ. ನಾವು ನಿರೀಕ್ಷೆಯನ್ನು ಕಳೆದುಕೊಳ್ಳಲು ಹವಣಿಸುತ್ತೇವೆ. ನಾವು ಬಿಟ್ಟು ಬಿಡುವುದಕ್ಕೆ ಉದ್ದೇಶಿಸುತ್ತೇವೆ, ''ನನ್ನಿಂದ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಥವಾ ನಾನು ನನ್ನ ಗುರಿಗಳನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ'' ಎಂದು ಯೋಚಿಸುವುದಕ್ಕೆ ನಾವು ಶುರು ಮಾಡುತ್ತೇವೆ. ನಮ್ಮ ಗುರಿಗಳನ್ನು ಮುಟ್ಟುವ ಸಾಧ್ಯತೆಯ ಆಶೆಯನ್ನು ನಾವು ಬಿಟ್ಟು ಬಿಡುತೇವೆ.

ಕೆಲವು ಸಲ, ನಾವು ಸಂಪೂರ್ಣವಾಗಿ ಸಿದ್ಧವಾಗಿಲ್ಲದ, ನಿರೀಕ್ಷಿಸದ ತಿರುವು ಮತ್ತು ಪರಿಸ್ಥಿತಿಗಳು ಜೀವನದಲ್ಲಿ ಕಾಣಿಸಿಕೊಳ್ಳುತ್ತವೆ. ಯಾವ ಕಡೆಗೂ ತಿರುಗಲಾಗದೆ, ನಮ್ಮನ್ನು ನಾವೇ ರಸ್ತೆಯ ಕೊನೆಯಲ್ಲಿರುವವರಂತೆ ಕಾಣಬಹುದು. ಈ ಪುಸ್ತಕವನ್ನು ಓದುತ್ತಿರುವ, ನಿಮ್ಮಲ್ಲಿ ಕೆಲವರು, ನಿರಾಶೆಯ ಪರಿಸ್ಥಿತಿಯ ಮಧ್ಯದಲ್ಲಿ ಇರಬಹುದು. ಅದು ನಿಮ್ಮ ಕೆಲಸ, ಜೀವನ ವೃತ್ತಿ, ವಿದ್ಯಾಭ್ಯಾಸ, ಮನೆ, ಮದುವೆ ಅಥವಾ ಕುಟುಂಬ ಯಾವುದಾದರೂ ಆಗಿರಬಹುದು. ಜೀವನದಲ್ಲಿ ಅನೇಕ ವಿಷಯಗಳು ತಪ್ಪಾಗಿ ಹೋಗಿರಬಹುದು. ಆದರೆ ಜೀವವಿಲ್ಲದ ಮತ್ತು ನಿರಾಶೆಯ ಪರಿಸ್ಥಿತಿಗೆ ಮತ್ತು ಸನ್ನಿವೇಶಕ್ಕೆ ಸತ್ಯವೇದದ ದೇವರು ವಿಶೇಷವಾಗಿ ಸತ್ತಂತವುಗಳಿಗೆ ಜೀವ ಕೊಡುವಾತನು

ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸಿ ಆತನು ನಿನ್ನೊಂದಿಗೆ ಇರುವಾಗ ನಿರಾಶೆಗೆ ವಿರೋಧವಾಗಿ ನೀನು ನಿರೀಕ್ಷಿಸಬಹುದು. ಎಲ್ಲವೂ ನಿರಾಶೆಯಾಗಿ ಕಾಣುವಾಗ, ನೀನು ಗೆದ್ದು ಹೊರ ಬರಬಹುದು. ಈ ಪುಸ್ತಕವು ಸಾಧಾರಣವಾಗಿ ಪ್ರೋತ್ಸಾಹಿಸುವ ವಾಕ್ಯಗಳನ್ನು ತರುತ್ತದೆ ಮತ್ತು ನಿರೀಕ್ಷೆಯನ್ನು ಕಳೆದುಕೊಳ್ಳಬಾರದೆಂದು ಎಚ್ಚರಿಸುತ್ತದೆ.

## ನಿರೀಕ್ಷೆಯನ್ನು ಹೊಂದುವುದಕ್ಕೆ ಇರುವ ಮಹತ್ವಗಳು

ನಿರೀಕ್ಷೆಯನ್ನು ಹೊಂದಿಕೊಳ್ಳುವುದು ಬಹಳ ಮುಖ್ಯವಾದುದು. ''ನಿರೀಕ್ಷೆ'' ಎಂದರೆ ನಿರೀಕ್ಷಿಸು, ಎದುರು ನೋಡು, ಆಸೆ, ಕನಸು ಅಥವಾ ಹೆಬ್ಬಯಕೆ ಎಂದು ಅರ್ಥ. ಕ್ರಿಸ್ತೀಯ ಜೀವಿತದಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ''ನಿರೀಕ್ಷೆ'', ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಮೂರು ವಿಷಯಗಳು ಮುಖ್ಯವಾದದ್ದು ಎಂದು ಬೈಬಲ್ ತಿಳಿಸುತ್ತದೆ - ಅದರಲ್ಲಿ ಒಂದು ''ನಿರೀಕ್ಷೆ''.

**''ಹೀಗಿರುವುದರಿಂದ ನಂಬಿಕೆ, ನಿರೀಕ್ಷೆ, ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ''** (ಕೊರಿಂಥ 13:13).

**ಸತ್ತಂತ ಮತ್ತು ನಿರೀಕ್ಷೆ ಇಲ್ಲದ, ಪರಿಸ್ಥಿತಿ ಮತ್ತು ಅವಸ್ಥೆಗಳಿಗೆ ಬೈಬಲ್ಲಿನ ದೇವರು ವಿಶೇಷವಾಗಿ ಜೀವ ಕೊಡುವಾತನಾಗಿದ್ದಾನೆ. ನಿರೀಕ್ಷೆ ಇಲ್ಲದ ಅವಸ್ಥೆಗಳನ್ನು ತಿರುವಿ ಹಾಕುವುದರಲ್ಲಿ ಆತನು ವಿಶೇಷವಾಗಿದ್ದಾನೆ. ಬೈಬಲ್ಲಿನ ದೇವರು ನಿಮ್ಮ ಅವಸ್ಥೆಗಳನ್ನು ತಿರುವಿ ಹಾಕಲಿ.**

# 2

# ನಿರೀಕ್ಷೆ - ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಬಹಳ ಮುಖ್ಯವಾದ ಭಾಗ

ವಿಶ್ವಾಸಿಗಳಾದ ನಾವು ಮುಂದೆ ಆಗುವ ಅನೇಕ ಸಂಗತಿಗಳಿಗಾಗಿ ನಿರೀಕ್ಷಿಸುತ್ತೇವೆ.

## ನಿತ್ಯ ಜೀವನ ನಿರೀಕ್ಷೆ

**‘‘ನಿತ್ಯ ಜೀವದ ನಿರೀಕ್ಷೆಯ ಆಧಾರವಾದ, ಸುಳ್ಳಾಡದ ದೇವರು ಆ ನಿತ್ಯಜೀವವನ್ನು ಕೊಡುತ್ತೇನೆಂದು ಆನಾದಿ ಕಾಲದಲ್ಲಿ ವಾಗ್ದಾನ ಮಾಡಿದ್ದಾನೆ’’** (ತೀತ 1:2).

ನಾವು ನಿತ್ಯ ಜೀವಕ್ಕಾಗಿ ನಿರೀಕ್ಷಿಸುತ್ತೇವೆ. ನಿತ್ಯಜೀವ ನಮ್ಮ ಆತ್ಮದಲ್ಲಿ ಇರುವುದರಿಂದ ಅದಕ್ಕಾಗಿ ನಾವು ನಿರೀಕ್ಷಿಸುತ್ತಿದ್ದೇವೆ.

## ಮಹಿಮೆಯ ನಿರೀಕ್ಷೆ

**‘‘ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವುದೇ’’** (ಕೊಲೊಸ್ಸೆ 1:27).

ನಮ್ಮಲ್ಲಿರುವ ಕ್ರಿಸ್ತನು ನಮ್ಮ ಮಹಿಮೆಯ ನಿರೀಕ್ಷೆಯಾಗಿದ್ದಾನೆ. ನಾವು ಈಗಿರುವ ಪ್ರಪಂಚಕ್ಕಿಂತಲೂ ಎಷ್ಟೋ ಉತ್ತಮವಾದ, ಮುಂಬರುವ ಯುಗದಲ್ಲಿ ಆತನೇ ನಮ್ಮ ಜೀವದ ನಿರೀಕ್ಷೆಯಾಗಿದ್ದಾನೆ. ಪರಲೋಕದಲ್ಲಿ ಆತನ ಪ್ರಸನ್ನತೆಯಲ್ಲಿ ನಾವು ಆತನೊಂದಿಗಿರುವ ಸಮಯಕ್ಕಾಗಿ ಎದುರು ನೋಡುತ್ತಿದ್ದೇವೆ.

## ರಕ್ಷಣೆಯ ನಿರೀಕ್ಷೆ

**ನಾವಾದರೋ ಹಗಲಿನವರಾಗಿರಲಾಗಿ ವಿಶ್ವಾಸ ಪ್ರೀತಿಗಳೆಂಬ ವಜ್ರಕವಚವನ್ನೂ ರಕ್ಷಣೆಯ ನಿರೀಕ್ಷೆ ಎಂಬ ಶಿರಸ್ತ್ರಾಣವನ್ನು ಧರಿಸಿಕೊಂಡು ಸ್ವಸ್ಥಚಿತ್ತರಾಗಿರೋಣ** (1 ಥೆಸಲೋನಿಕ 5:8).

**‘‘ಬಂಗಾರವು ನಾಶವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಾ ಹಾಕಿ ಶೋಧಿಸುವುದುಂಟಷ್ಟೆ. ಬಂಗಾರಕ್ಕಿಂತಲೂ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು**

**ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟು ಮಾಡುವುದು. ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯ ಫಲವಾಗಿರುವ ಆತ್ಮ ರಕ್ಷಣೆಯನ್ನು ಹೊಂದುವವರಾಗಿ ಹೇಳಲು ಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ''** (1 ಪೇತ್ರ 1:7-9).

ಈ ಹೊತ್ತು ರಕ್ಷಣೆ ಪ್ರಾರಂಭವಾಗುವುದಾದರೆ, ಅಲ್ಲಿರುವ ನಮ್ಮ ರಕ್ಷಣೆಯ ಭಾಗವನ್ನು ಕೂಡ ನಾವು ಎದುರು ನೋಡುವವರಾಗಿದ್ದೇವೆ.

## ಕ್ರಿಸ್ಥನ ಬರೋಣದ ನಿರೀಕ್ಷೆ

**''ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ''** (ತೀತ 2:13).

## ಪುನರುತ್ಥಾನದ ನಿರೀಕ್ಷೆ

**''ಇದಲ್ಲದೆ ನೀತಿವಂತರಿಗೂ ಅನೀತವಂತರಿಗೂ ಪುನರುತ್ಥಾನವಾಗುವದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟಿರುವ ಪ್ರಕಾರವೇ ನಾನೂ ನಿರೀಕ್ಷೆಯುಳ್ಳವನಾಗಿದ್ದೇವೆ''** (ಅಪೊಸ್ತಲರಕೃತ್ಯ 24:15).

# 3

# ನಿರೀಕ್ಷೆಯ ಮುಖ್ಯತ್ವ

ನಮ್ಮ ದಿನನಿತ್ಯದ ಜೀವಿತದಲ್ಲಿ ನಿರೀಕ್ಷೆಯನ್ನು ಪಡೆದುಕೊಳ್ಳುವುದು ಬಹಳ ಮುಖ್ಯ. ನಿರಾಶೆಯ ಪರಿಸ್ಥಿತಿಯ ಮಧ್ಯದಲ್ಲೂ, ನಾವು ಪೂರ್ಣ ನಿರೀಕ್ಷೆಯನ್ನು ಹೊಂದಿದ ಜನರಾಗಿರಬೇಕು. ನಿರೀಕ್ಷೆಯಲ್ಲಿ ಏಕೆ ಮುಂದುವರಿಸಬೇಕು ಎಂಬುದಕ್ಕೆ ಅನೇಕ ಕಾರಣಗಳಿವೆ.

## ತಡವಾದ ನಿರೀಕ್ಷೆ ಒಳ ಮನುಷ್ಯನನ್ನು ಬಲಹೀನಗೊಳಿಸುತ್ತದೆ.

‘‘**ಕೋರಿದ್ದಕ್ಕೆ ತಡವಾದರೆ ಮನಸ್ಸು ಬಳಲುವುದು; ಕೈಗೂಡಿದ ಇಷ್ಟಾರ್ಥವು ಜೀವವೃಕ್ಷವು**’’ (ಜ್ಞಾನೋಕ್ತಿ 13:12).

ಕೆಲವು ವೇಳೆ, ನಾವು ನಿರೀಕ್ಷಿಸಿಕೊಂಡದ್ದನ್ನು ಪಡೆಯಲು ತಡವಾಗುವುದು. ಒಂದು ನಿಯಮಿತ ವರ್ಷದಲ್ಲಿ ಒಂದು ನಿರ್ದಿಷ್ಟ ಕಾರ್ಯ ನೆರವೇರಬೇಕೆಂದು ನಾವು ಎದುರು ನೋಡುತ್ತಿರುತ್ತೇವೆ. ಆದರೆ ಆ ವರ್ಷದ ಕೊನೆಯಲ್ಲೂ ಅದು ನಡೆಯದೆ ಹೋಗಬಹುದು. ಬಹುಶಃ ಅದು ಮುಂದಿನ ವರ್ಷದಲ್ಲಿ ನೆರವೇರಬಹುದು ಎಂದು ನಮಗೆ ನಾವೇ ಹೇಳಿಕೊಳ್ಳುತ್ತೇವೆ. ಮತ್ತು  ಆಗಲೂ ಅದು ನಡೆಯದೆ ಹೋಗಬಹುದು. ನಾವು ನಿರೀಕ್ಷಿಸಿಕೊಂಡದ್ದು ತಡವಾಗುವಾಗ ಒಳಗಿನ ಮನುಷ್ಯ ನಿರೀಕ್ಷೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳಲು ಹವಣಿಸುವನು ಮತ್ತು ಬಲಹೀನನಾಗುವನು. ಆದರೆ ನಾವು ನಿರೀಕ್ಷಿಸಿದ ವಸ್ತುವು ಬಂದು ಸೇರಿದಾಗ, ಅದು ಜೀವವೃಕ್ಷದ ಹಾಗೆ ಇರುತ್ತದೆ. ಅದು ನಮ್ಮನ್ನು ಚೇತನಗೊಳಿಸುತ್ತದೆ ಮತ್ತು ಬಲಗೊಳಿಸುತ್ತದೆ. ನಾವು ಚೈತನ್ಯ ಪಡೆದು ನವೀಕರಿಸಲ್ಪಡುತ್ತೇವೆ. ನಮ್ಮ ನಂಬಿಕೆ ಮೇಲಕ್ಕೆರುತ್ತದೆ. ನಾವು ಉತ್ತೇಜಿಸಲ್ಪಟ್ಟು ಮುಂದೆ ಹೋಗಲು ಸಾಧ್ಯವಾಗುತ್ತದೆ.

## ನಿರೀಕ್ಷೆ ಆತ್ಮದ (ಪ್ರಾಣದ) ಲಂಗರು

‘‘**ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರು...**’’ (ಇಬ್ರಿಯ 6:19).

ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರು, ‘‘ಪ್ರಾಣ’’ ಎನ್ನುವ ಪದ ಮನಸ್ಸು ಅಥವಾ ಬುದ್ದಿ, ಇಷ್ಟ ಮತ್ತು ಮನೋಭಾವವನ್ನು ತೋರುತ್ತದೆ. ಪ್ರಾಣಕ್ಕೆ

ಸಂಬಂಧಪಟ್ಟ ನಿರೀಕ್ಷೆಯ ಪಾತ್ರವನ್ನು ವಿವರಿಸುವುದಕ್ಕೆ ಒಂದು ಹಡಗಿನಿಂದ ಬಿಟ್ಟ ಲಂಗರನ್ನು ಇಲ್ಲಿ ಹೋಲಿಕೆಯಾಗಿ ಉಪಯೋಗಿಸಲ್ಪಟ್ಟಿದೆ. ಲಂಗರನ್ನು ಸಮುದ್ರದೊಳಗೆ ಹಾಕಿದಾಗ, ಬಿರುಗಾಳಿಯ ಮಧ್ಯದಲ್ಲಿಯೂ ಅದು ಧೃಡತೆ ಅಥವಾ ಸ್ಥಿರತೆಯನ್ನು ತರುತ್ತದೆ. ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರು ಎಂದು ಸತ್ಯವೇದ ಹೇಳುತ್ತದೆ. ಅಂದರೆ ನನಗೆ ನಂಬಿಕೆ ಇಲ್ಲದಿದ್ದರೆ, ನನ್ನ ಪ್ರಾಣ - ನನ್ನ ಚಿತ್ತ, ಮನೋಭಾವ ಮತ್ತು ಬುದ್ಧಿ ಶಕ್ತಿಗೆ, ಕಾಲವು ನಮಗೆ ಎದುರು ಬೀಳುವ ಸಮಯದಲ್ಲಿ ಬೇಕಾದ ಸ್ಥಿರತೆ ಅಥವಾ ಶಕ್ತಿಇರುವುದಿಲ್ಲ, ಜನರು ನಿರೀಕ್ಷೆಯನ್ನು ಸಂಪೂರ್ಣವಾಗಿ ಕಳೆದುಕೊಂಡಾಗ ಮುಂದೆ ಸಮುದ್ರ ಪ್ರಯಾಣ ಮಾಡುವುದಕ್ಕೆ ಜೀವಿತದ ಬಿರುಗಾಳಿ ನಮ್ಮನ್ನು ಇನ್ನೂ ಮುಳುಗಿಸುವಂತೆ ಕಾಣುತ್ತದೆ. ಅವರು ಹತಾಶರಾಗುತ್ತಾ ಸುಲಭವಾಗಿ ಬಿಟ್ಟು ಬಿಡುತ್ತಾರೆ. ''ಯಾರು ನನ್ನನ್ನು ಗಮನಿಸುವುದಿಲ್ಲ'', ''ಎಲ್ಲಾ ತಪ್ಪು'' ಮತ್ತು ''ಮತ್ತೆ ಅದು ಸರಿಯಾಗುವುದಿಲ್ಲ'' ಎಂಬ ನಿರಾಶೆಯ ಆಲೋಚನೆಗಳು ಅವರ ಮನಸ್ಸಿನಲ್ಲಿ ಹರಿಯುತ್ತಿರುತ್ತವೆ. ಇಂತಹ ಸಮಯದಲ್ಲಿ ಅನೇಕರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಆಲೋಚಿಸುತ್ತಾರೆ. ಆದ್ದರಿಂದ ಬಹು ಕಷ್ಟದ ಪರಿಸ್ಥಿತಿಯಲ್ಲಿಯೂ ನಿರೀಕ್ಷೆಯನ್ನು ಕಳೆದುಕೊಳ್ಳದೆ ಇರುವುದು ಬಹು ಮುಖ್ಯವಾಗಿದೆ. ನಿರೀಕ್ಷೆ ಪ್ರಾಣಕ್ಕೆ ಲಂಗರಾಗಿದೆ.

## ನಿರೀಕ್ಷೆ ನಂಬಿಕೆಗೆ ಮುನ್ಸೂಚಕವಾಗಿದೆ.

**''ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದೂ, ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವುದೂ ಆಗಿದೆ''** (ಇಬ್ರಿಯ 11:1).

ನಿರೀಕ್ಷೆ ಮುಖ್ಯವಾದದ್ದು ಏಕೆಂದರೆ ನಂಬಿಕೆ ನಿರೀಕ್ಷೆಯನ್ನು ಆತುಕೊಂಡಿದೆ. ನಿರೀಕ್ಷೆ ನಂಬಿಕೆಗೆ ಮುಂಚಿತವಾಗಿದೆ. ಯಾವಾಗ ನಮಗೆ ನಿರೀಕ್ಷೆ ಇರುತ್ತದೋ ಆಗ ಮಾತ್ರ ನಂಬಿಕೆ ಇರಲು ಸಾಧ್ಯ. ಅನಾರೋಗ್ಯದಿಂದ ಅಂತ್ಯದಲ್ಲಿರುವ ಮನುಷ್ಯನು ಸ್ವಲ್ಪ ದಿನ ಮಾತ್ರ ಉಳಿಯುತ್ತಾನೆ ಮತ್ತು ವೈದ್ಯಕೀಯ ವಿಜ್ಞಾನದಿಂದ ಏನೂ ಸಹಾಯ ಮಾಡಲು ಸಾಧ್ಯವಿಲ್ಲವೆಂದು ವೈದ್ಯರು ಹೇಳಿದ್ದಾರೆ ಎಂಬುದನ್ನು ಆಲೋಚಿಸಿ ಅಂತಹ ಪರಿಸ್ಥಿತಿಯಲ್ಲಿ ಅನೇಕ ಜನ ಎಲ್ಲಾ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಆತನ ಕೊನೆಯ ಕ್ಷಣಗಳು, ಆತನ ಕೊನೆಯ ಮಾತುಗಳು ಮತ್ತು ಆತನ ಶವಸಂಸ್ಕಾರದ ಚಿತ್ರಗಳು ಆತನ ಮನಸ್ಸನ್ನು ತುಂಬುತ್ತವೆ. ಮನುಷ್ಯನು ನಿರೀಕ್ಷೆಯನ್ನು ಕಳೆದುಕೊಂಡಾಗ, ನಂಬಿಕೆಯೂ ಸಹ ಕಾರ್ಯ ಮಾಡಲು ಸಾಧ್ಯವಿಲ್ಲ. ಏಕೆಂದರೆ ''ನಂಬಿಕೆಯೋ ನಾವು

ನಿರೀಕ್ಷಿಸುವವುಗಳ ವಿಷಯವಾಗಿ ಭರವಸೆದಿಂದಿರುವುದಾಗಿದೆ''. ಸ್ವಸ್ತವಾಗುತ್ತೀನಿ ಎನ್ನುವ ನಿರೀಕ್ಷೆ ಮನುಷ್ಯನಿಗೆ ಇಲ್ಲದಿದ್ದಾಗ, ದೇವರಿಂದ ಸ್ವಸ್ಥತೆಯನ್ನು ಪಡೆಯಲು ನಂಬಿಕೆ ಇಡುವುದು ಕಷ್ಟ. ದೇವರಲ್ಲಿ ನಂಬಿಕೆ ಇಡುವುದಕ್ಕೆ ನಿರೀಕ್ಷೆ ಪೂರ್ವಗತ್ಯ ವಸ್ತು. ಖಾಯಿಲೆ ಮನುಷ್ಯನು ಕೊನೇ ಪಕ್ಷ ತಾನು ತನ್ನ ಮರಣದ ಹಾಸಿಗೆಯಿಂದ ಚೇತರಿಸಿಕೊಂಡು ನಡೆದಾಡುತ್ತಿದ್ದೀನಿ ಎನ್ನುವ ದರ್ಶನ ಕಾಣುವುದಕ್ಕಾದರೂ ಪ್ರಯತ್ನಿಸಬೇಕು. ವೈದ್ಯರು ಕೈ ಬಿಟ್ಟಿದ್ದರೂ ಪರಲೋಕದ ದೇವರು ವಾಸಿ ಮಾಡುವನು ಮತ್ತು ಆತನು ಅದನ್ನು ಮಾಡುವುದಕ್ಕೆ ಇಷ್ಟವುಳ್ಳವನಾಗಿದ್ದಾನೆ ಎಂಬ ನಿರೀಕ್ಷೆ ಇರಬೇಕು. ಸಂಪೂರ್ಣವಾಗಿ ಗುಣ ಹೊಂದುತ್ತೇನೆ ಎನ್ನುವ ನಿರೀಕ್ಷೆ. ನಂಬಿಕೆ ಸ್ವಸ್ಥತೆಯನ್ನು ತರುವುದಕ್ಕೆ ತನ್ನ ಪಾತ್ರ ವಹಿಸಲು ಶಕ್ತಗೊಳಿಸುತ್ತದೆ.

# 4

# ನಿರಾಶೆಯ ಸ್ಥಿತಿಯನ್ನು ಬದಲಾಯಿಸುವ ದೇವರು

ನಾವು ಯಾವುದೇ ರೀತಿಯ ಪರಿಸ್ಥಿತಿಯಲ್ಲಿರಬಹುದು, ಪರಿಸ್ಥಿತಿ ಎಷ್ಟೇ ನಿರಾಶಾದಾಯಕವಾಗಿ ಕಾಣಬಹುದು. ಈ ನಿರಾಶಾದಾಯಕ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕೆ ಒಬ್ಬ ದೇವರಿದ್ದಾರೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆಮೆನ್! ನಿಮ್ಮ ನಿರಾಶಾದಾಯಕ ಪರಿಸ್ಥಿತಿ ನಿಮ್ಮ ಮದುವೆಯಾಗಿರಬಹುದು, ನಿನ್ನ ಕೆಲಸವಾಗಿರಬಹುದು, ಮಕ್ಕಳಾಗಿರಬಹುದು, ಹಣವಾಗಿರಬಹುದು, ಜೀವನ ವೃತ್ತಿಯಾಗಿರಬಹುದು. ಆದರೂ ನಿರಾಶಾದಾಯಕ ಪರಿಸ್ಥಿತಿ. ಅಥವಾ ವಿದ್ಯಾಭ್ಯಾಸವಾಗಿರಬಹುದು ಅಥವಾ ಏನಾದರಾಗಿರಬಹುದು. ಅದು ಏನೇ ಆಗಿದ್ದರೂ ಅದನ್ನು ಲಕ್ಷಿಸದೆ, ನಾವು ಸೇವಿಸುವ ದೇವರು ನಿರಾಶಾದಾಯಕ ಪರಿಸ್ಥಿತಿಗಳನ್ನು ಬದಲಾಯಿಸುವನು ಎಂಬ ಕಾರ್ಯದ ಮೇಲೆ ಕೇಂದ್ರೀಕರಿಸಬೇಕು. ಆದ್ದರಿಂದಲೇ ನಾವು ನಿರೀಕ್ಷೆಯನ್ನು ಬಿಟ್ಟು ಬಿಡಬೇಕಾಗಿಲ್ಲ, ದೇವರು ನಿರಾಶಾದಾಯಕ ಪರಿಸ್ಥಿತಿಗಳನ್ನು ತಲೆಕೆಳಗೆ ಮಾಡಿದ ಕೆಲವು ಗೊತ್ತಿರುವ ಉದಾಹರಣೆಗಳನ್ನು ಸತ್ಯವೇದದಿಂದ ನಾವು ನೋಡೋಣ.

## ಬಡ ಹೆಂಗಸರು

ತನ್ನ ಇಬ್ಬರು ಗಂಡು ಮಕ್ಕಳನ್ನು ಮತ್ತು ದೊಡ್ಡ ಮೊತ್ತದ ಸಾಲವನ್ನು ಬಿಟ್ಟು ಸತ್ತು ಹೋದ ಆ ಗಂಡಸಿನ ಹೆಂಡತಿಯನ್ನು ಗಮನಿಸಿ (2 ಅರಸು 4:1-7). ಸಾಲ ಕೊಟ್ಟವರು ಹಣವನ್ನು ಕೇಳುವುದಕ್ಕೆ ಬಂದರು ಮತ್ತು ಮಕ್ಕಳನ್ನು ಕರೆದುಕೊಂಡು ಹೋಗುವುದಾಗಿ ಬೆದರಿಕೆ ಹಾಕುತ್ತಿದ್ದರು. ಈ ಹೆಂಗಸಿನ ಸ್ಥಿತಿ ನಿರಾಶಾದಾಯಕವಾಗಿತ್ತು! ಅವಳು ದೇವರ ಸೇವಕನಾದ ಎಲಿಷನ ಬಳಿಗೆ ಹೋಗಿ ತನ್ನ ಸಂಕಟವನ್ನು ವಿವರಿಸಿ, ಅವನ ಸಹಾಯವನ್ನು ಕೋರಿದಳು. ನಿನ್ನ ಮನೆಯಲ್ಲಿ ಏನಿದೆ ಎಂದು ಆತನು ಆಕೆಯನ್ನು ಕೇಳಿದನು, ಒಂದು ಮೊಗೆ ಎಣ್ಣೆ ಮಾತ್ರ ಇದೆ ಎಂದು ಅವಳು ಉತ್ತರಿಸಿದಳು. ಎಷ್ಟು ಪಾತ್ರೆಗಳು ಸಿಕ್ಕುತ್ತವೋ ಅಷ್ಟು ಪಾತ್ರೆಗಳನ್ನು ತಂದು, ತನ್ನಲ್ಲಿರುವ ಎಣ್ಣೆಯನ್ನು ಒಂದೊಂದು ಪಾತ್ರೆಯಲ್ಲೂ ಸುರಿಯುವಂತೆ ಎಲಿಷನು ಅವಳಿಗೆ ಹೇಳಿದನು. ಅದ್ಭುತವಾಗಿ, ಎಣ್ಣೆ ಹೆಚ್ಚಾಗಿ ಎಲ್ಲಾ ಪಾತ್ರೆಗಳು ಎಣ್ಣೆಯಿಂದ

ತುಂಬಲ್ಪಟ್ಟವು. ಎಣ್ಣೆಯನ್ನು ಮಾರಿ, ಸಾಲವನ್ನು ತೀರಿಸಿ, ಹೊಸ ಜೀವನ ಮಾಡಿರಿ ಎಂದು ಎಲಿಷನು ಅವಳಿಗೆ ಹೇಳಿದನು. ಆ ಹೆಂಗಸಿನ ಅವಶ್ಯಕತೆಯನ್ನು ಅದ್ಭುತವಾಗಿ ಒದಗಿಸಿ, ದೇವರು ಅವಳ ನಿರಾಶಾದಾಯಕ ಸ್ಥಿತಿಯನ್ನು ಬದಲಾಯಿಸಿದನು.

## ಮದುವೆ ಔತಣದಲ್ಲಿ ಅದ್ಭುತ

ಮದುವೆ ಔತಣದಲ್ಲಿ ದ್ರಾಕ್ಷಾರಸವು ಸಾಲದೆ ಹೋಯಿತು - ಸರಳವಾದ ಕೊರತೆಯ ಪರಿಸ್ಥಿತಿ. ಏನು ಮಾಡುವುದು ಎಂದು ಅವರು ಯೋಚಿಸುತ್ತಿರುವಾಗ, ಯೇಸುವಿನ ತಾಯಿ ''ಯೇಸು ನಿಮಗೆ ಏನು ಮಾಡುವುದಕ್ಕೆ ಹೇಳುವನೋ ಅದನ್ನು ಮಾಡಿರಿ'' ಎಂದು ಮದುವೆ ಔತಣದಲ್ಲಿ ಕೆಲಸಗಾರರಿಗೆ ಹೇಳಿದಳು. ಯೇಸು ಅವರಿಗೆ ಬಾನೆಗಳಲ್ಲಿ ನೀರನ್ನು ತುಂಬಿ, ಅದನ್ನು ಅತಿಥಿಗಳಿಗೆ ಕೊಡಿರಿ ಎಂದು ಹೇಳಿದನು. ನೀರು ಅಲೌಕಿಕವಾಗಿ ದ್ರಾಕ್ಷಾರಸವಾಗಿ ಮಾರ್ಪಟ್ಟಿತು ಮತ್ತು ಮದುವೆಗೆ ಬಂದಿದ್ದ ಎಲ್ಲರಿಗೂ ಸಾಕಾಗಿತ್ತು. (ಯೋಹಾ 2:1 - 11) ಅದ್ಭುತವಾಗಿ ಒದಗಿಸುವ ಮತ್ತೊಂದು ಸಂಗತಿ! ದೇವರ ಆಲೋಚನೆಯನ್ನು ಕೇಳಿ, ಆತನು ಹೇಳಿದ ಹಾಗೆ ಮಾಡುವಾಗ, ನಿರಾಶಾದಾಯಕ ಪರಿಸ್ಥಿತಿಗಳು ಬದಲಾಗುತ್ತವೆ.

## ನಿರಾಶಾದಾಯಕ ರಾತ್ರಿಯ ನಂತರದ ಮುಂಜಾನೆ

ಲೂಕ 5ನೇ ಅಧ್ಯಾಯದಲ್ಲಿ ಯೇಸು ಮಾಡಿದ ವ್ಯಾಪಾರದ ಅದ್ಭುತ ನಮಗೋಸ್ಕರ ಬರೆಯಲ್ಪಟ್ಟಿದೆ. ಪೇತ್ರನು ತನ್ನ ವ್ಯಾಪಾರದ ಜೊತೆಗಾರರಾದ - ಯಾಕೋಬ, ಯೋಹಾನ ಮತ್ತು ಅಂದ್ರೆಯ ಇವರೆಲ್ಲರೂ ಮೀನು ಹಿಡಿಯುವ ವ್ಯಾಪಾರದಲ್ಲಿದ್ದರು. ಅವರೆಲ್ಲರೂ ಮೀನು ಹಿಡಿಯುವವರಾಗಿದ್ದರು. ಒಂದು ಸಂದರ್ಭದಲ್ಲಿ ಅವರು ಇಡೀ ರಾತ್ರಿಯೆಲ್ಲಾ ಮೀನು ಹಿಡಿಯುವುದರಲ್ಲಿ ಕಳೆದರು ಮತ್ತು ಏನೂ ಸಿಕ್ಕಲಿಲ್ಲ. ಮಾರನೆಯ ದಿನ ಅವರು ಹಿಂತಿರುಗುವಾಗ, ಯೇಸು ಸ್ವಾಮಿಯು ಅವರನ್ನು ಸಂಧಿಸಿದರು. ಆತನ ಮಾತುಗಳನ್ನು ಕೇಳಲು ನೆರೆದಿದ್ದ ಗುಂಪಿಗೆ ಉಪದೇಶ ಮಾಡಲು ಅವರ ದೋಣಿ ಬೇಕೆಂದು ಅವರನ್ನು ಕೇಳಿದನು. ಉಪದೇಶ ಮಾಡಿದ ನಂತರ ಯೇಸು ಸ್ವಾಮಿ ಪೇತ್ರನಿಗೆ ಮತ್ತೊಂದು ಸಲ ಸಮುದ್ರಕ್ಕೆ ಹೋಗಿ ಮೀನು ಬೇಟೆಗಾಗಿ ಬಲೆಯನ್ನು ಹಾಕು ಎಂದು ಹೇಳಿದನು. ಅದಕ್ಕೆ ಪೇತ್ರನು ''ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸ ಪಟ್ಟರೂ ಏನೂ ಸಿಕ್ಕಲಿಲ್ಲ; ಆದರೂ ನಿನ್ನ ಮಾತಿನ ಮೇಲೆ ಬಲೆಯನ್ನು ಹಾಕುತ್ತೇನೆ'' ಎಂದನು (ಲೂಕ 5; 5) ತನ್ನ ಪ್ರಯತ್ನಗಳಿಂದ ಯಾವುದೇ ಫಲಿತಾಂಶಗಳು ಉಂಟಾಗಲಿಲ್ಲ

ಎಂದು ಪೇತ್ರನಿಗೆ ಗೊತ್ತಿತ್ತು. ಆದರೂ ಯೇಸು ಸ್ವಾಮಿ ಹೇಳಿದ್ದನ್ನು ಮಾಡಲು ಆತನು ಚಿತ್ತವುಳ್ಳವನಾಗಿದ್ದನು.

ದೇವರಿಂದ ಬಂದ ಒಂದು ಮಾತು ಆ ನಿರಾಶಾದಾಯಕ ಪರಿಸ್ಥಿತಿಯನ್ನು ಮಾರ್ಪಡಿಸಿತು. ಯೇಸು ಹೇಳಿದ ಮಾತಿಗೆ ಸ್ವಲ್ಪವೂ ಸಂಶಯಪಡದ ಪೇತ್ರನ ವಿಧೇಯತೆ, ಅವನಿಗೆ ''ಹಣದ ಅದ್ಭುತವನ್ನು'' ತಂದಿತು.

## ಇಸ್ರೇಲ್ ರಾಷ್ಟ್ರ

ಯುಹೂದಿ ಜನರು ಪ್ರಪಂಚದಲ್ಲೆಲ್ಲಾ ಚದುರಿಸಲ್ಪಟ್ಟಿದ್ದರು ಮತ್ತು ಚೆಲ್ಲಾಪಿಲ್ಲಿಯಾಗಿದ್ದರು. ನಿರಾಶಾದಾಯಕ ಪ್ರಜ್ಞೆ ಯಹೂದಿ ಜನರನ್ನು ಹಿಡಿದಿತ್ತು. ಯೆಹೆಜ್ಕೆಯಲ 37ರಲ್ಲಿ ಯೆಹೂದ್ಯರ ಪರಿಸ್ಥಿತಿಯನ್ನು ವಿವರಿಸಲು ದೇವರು ಯೆಹೆಜ್ಕೆಯಲನಿಗೆ ಒಣ ಎಲುಬುಗಳು ತುಂಬಿದ ಕಣಿವೆಯನ್ನು ತೋರಿಸಿದರು. ''ನರಪುತ್ರನೇ, ಈ ಎಲುಬುಗಳು ಇಸ್ರಾಯೇಲಿನ ಪೂರ್ಣವಂಶವು, ಇಗೋ ಆ ವಂಶೀಯರು - ಅಯ್ಯೋ ನಮ್ಮ ಎಲುಬುಗಳು ಒಣಗಿ ಹೋದವು, ನಮ್ಮ ನಿರೀಕ್ಷೆಯು ಹಾಳಾಯಿತು; ನಾವು ಬುಡನಾಶವಾದೆವು ಅಂದುಕೊಳ್ಳುತ್ತಿದ್ದಾರೆ'' (ಯೆಹೆಜ್ಕೆಯಲ 37:11).

ಆಗ ದೇವರು ಯೆಹೆಜ್ಕೇಲನಿಗೆ ಆ ಒಣ ಎಲುಬುಗಳಿಗೆ ಪ್ರವಾದಿಸು ಎಂದನು. ಆದ್ದರಿಂದ ಪ್ರವಾದಿಸಿ ಅವರಿಗೆ ಹೇಳು - ''ಕರ್ತನಾದ ಯೆಹೋವನು ಇಂತೆನ್ನುತ್ತಾನೆ - ನನ್ನ ಜನರೇ, ನೋಡಿರಿ, ನಾನು ನಿಮ್ಮ ಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿ ಇಸ್ರಾಯೇಲ್ ದೇಶಕ್ಕೆ ಸೇರ ಮಾಡುವೆನು'' (ಯೆಹೆಜ್ಕೆಯಲ 37:12) ಇಸ್ರಾಯೇಲರನ್ನು ಮತ್ತೆ ಕೂಡಿಸುವುದಾಗಿಯೂ ಮತ್ತು ಇಸ್ರಾಯೇಲ್ ರಾಷ್ಟ್ರವನ್ನು ಮರು ಸ್ಥಾಪನೆ ಮಾಡುವುದಾಗಿಯೂ ದೇವರು ಮೋದಲೇ ಭವಿಷ್ಯ ನುಡಿದಿದ್ದರು. ದೇವರು ತನ್ನ ಮಾತನ್ನು 1948 ಮೇ 14 ರಂದು ನೆರವೇರಿಸಿ ಇಸ್ರಾಯೇಲನ್ನು ಒಂದು ರಾಷ್ಟ್ರವನ್ನಾಗಿ ಪ್ರಕಟಿಸಿದರು. ಪ್ರಪಂಚದ ಎಲ್ಲಾ ಕಡೆಯಿಂದಲೂ ಯೆಹೂದ್ಯರು ತಮ್ಮ ಸ್ವಂತ ರಾಷ್ಟ್ರಕ್ಕೆ ಹಿಂತಿರುಗುವುದಕ್ಕೆ ಪ್ರಾರಂಭಿಸಿದರು.

ಆದ್ದರಿಂದ, ನಾವು ಅಂದುಕೊಂಡ ನಿರಾಶಾದಾಯಕ ಸ್ಥಿತಿಯನ್ನು ದೇವರು ಮಾರ್ಪಡಿಸಲು ಸಾಧ್ಯ. ಪರಿಸ್ಥಿತಿಗಳನ್ನು ಮಾರ್ಪಡಿಸಲು ದೇವರು ''ಗೋರಿಗಳನ್ನು''

ತೆರೆದು ''ಒಣ ಎಲುಬುಗಳಿಗೆ'' ಜೀವ ಕೊಡಲು ಚಿತ್ತವುಳ್ಳವನಾಗಿದ್ದಾನೆ ಮತ್ತು ಶಕ್ತವುಳ್ಳವನಾಗಿದ್ದಾನೆ. ದೇವರಿಗೆ ಯಾವುದೂ ನಿರಾಶಾದಾಯಕವಲ್ಲ.

## ಅಬ್ರಹಾಮ ಮತ್ತು ಸಾರಾ

ಅಬ್ರಹಾಮ ಮತ್ತು ಸಾರಾಳಿಗೆ ಅವರದೇ ಆದ ಸ್ವಂತ ಮಗುವನ್ನು ಕೊಡುತ್ತೇನೆಂದು ದೇವರು ವಾಗ್ದಾನ ಮಾಡಿದಾಗ ಅವರು ಬಹು ವೃದ್ಧರಾಗಿದ್ದರು. ದೇವರು ಅವರಿಗೆ ಮಗನನ್ನು ವಾಗ್ದಾನ ಮಾಡಿದನು ಮತ್ತು ಆ ಮಗನ ಮುಖಾಂತರ ಆಕಾಶದಲ್ಲಿರುವ ಲೆಕ್ಕಿಸಲಾರದ ನಕ್ಷತ್ರಗಳಷ್ಟು ಮತ್ತು ಸಮುದ್ರ ತೀರದಲ್ಲಿರುವ ಅಸಂಖ್ಯಾತ ಮರಳಿನಷ್ಟು ಸಂತಾನವನ್ನು ಅವರು ಹೊಂದುವರು ಎಂದು ದೇವರು ಹೇಳಿದರು. ಮಗುವನ್ನು ಪಡೆಯುವ ವಿಷಯದಲ್ಲಿ ಅವರು ನಿರಾಶಾದಾಯಕ ಸ್ಥಿತಿಯಲ್ಲಿ ಇದ್ದರು, ಏಕೆಂದರೆ ಇಷ್ಟು ವರ್ಷಗಳು ಅವರಿಗೆ ಮಕ್ಕಳೇ ಇರಲಿಲ್ಲ. ಅಬ್ರಹಾಮನಿಗೆ 99 ವರ್ಷವಾದಾಗಲೂ. ಸಾರಾಳ ಗರ್ಭ ಅದುವರೆಗೂ ಬಂಜೆಯಾಗಿತ್ತು - ನಿರೀಕ್ಷೆಯೇ ಇಲ್ಲದ ಪರಿಸ್ಥಿತಿ.

ಪರಿಸ್ಥಿತಿಗಳ ಬಗ್ಗೆ ಸತ್ಯವೇದದಲ್ಲಿ ಹೀಗೆ ಹೇಳಿದೆ;

**''ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲ ಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ, ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವುದು ಎಂಬುದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವುದಕ್ಕೆ ಮಾರ್ಗ ತೋರದೆ ಇರುವುದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು''** (ರೋಮಾಪುರ 4:17, 18).

ಅನುಸರಿಸುವುದಕ್ಕೆ ಎಂತಹ ಶ್ರೇಷ್ಟವಾದ ಉದಾಹರಣೆಯಾಗಿದೆ. ''ಅಬ್ರಹಾಮನು ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು.'' ನಿರೀಕ್ಷಿಸುವುದಕ್ಕೆ ಯಾವುದೇ ಕಾರಣ ಇಲ್ಲದಿದ್ದಾಗಲೂ, ದೇವರು ಹೇಳಿದ್ದನ್ನು ಅಬ್ರಹಾಮನು ಅಚಲವಾದ ನಿರೀಕ್ಷೆಯಿಂದ ನಂಬಿದನು. ಅವನು ನಿರೀಕ್ಷೆಯಲ್ಲಿ ನಂಬಿದ್ದರಿಂದ ಏನು ಹೇಳಲ್ಪಟ್ಟಿತೋ ಅದರ ಅನುಸರವಾಗಿ... ಆತನು ಆದನು.

ದೇವರು ನಿನಗೆ ವಾಗ್ದಾನ ಕೊಟ್ಟಾಗ ''ದೇವರೇ ಈ ವಾಗ್ದಾನ ಹಾಸ್ಯಾಸ್ಪದವಾಗಿದೆಯಲ್ಲಾ ಎಂದು ಹೇಳಲೇಬೇಡ.'' ನಮ್ಮ ದೇವರು ಸತ್ತವರಿಗೆ ಜೀವ ಕೊಡುವ ದೇವರಾಗಿರುವುದರಿಂದ ಅದು ಹಾಸ್ಯಾಸ್ಪದವಾಗಿರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದೇವರು ನಿನಗೆ ವಾಗ್ದಾನ ಮಾಡಿದಾಗ, ಪರಿಸ್ಥಿತಿಯು ಎಷ್ಟೇ ನಿರಾಶಾದಾಯಕವಾಗಿದ್ದರೂ ಪರವಾಗಿಲ್ಲ. ನಿನ್ನೊಂದಿಗೆ ಮಾತನಾಡುತ್ತಿರುವ ದೇವರು ಬದಲಾಗದವನು. ಸತ್ತವರಿಗೆ ಜೀವ ಕೊಡುವವನು - ಇಲ್ಲದ್ದನ್ನು ಇರುವುದಾಗಿ ಕರೆಯುವವನು ಮತ್ತು ಯಾವುದೇ ರೀತಿಯ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕೆ ಶಕ್ತಿವುಳ್ಳಾತನು ಎಂಬುದನ್ನು ನೆನಪಿನಲ್ಲಿ ಇಟ್ಟುಕೋ. ದೇವರು ಪರಿಸ್ಥಿತಿಯನ್ನು ಉತ್ತಮವಾಗಿ ಮಾಡುವುದಕ್ಕೆ ಸಾಧ್ಯವುಳ್ಳಾತನು ಮಾತ್ರವಲ್ಲದೆ ಅದನ್ನು ಸಂಪೂರ್ಣವಾಗಿ ಬದಲಾಯಿಸಲು ಶಕ್ತನಾಗಿದ್ದಾನೆ! ಅಸ್ತಿತ್ವದಲ್ಲಿ ಇಲ್ಲದವುಗಳನ್ನು ಅಸ್ತಿತ್ವಕ್ಕೆ ತರುವುದಕ್ಕೆ ಆತನು ಶಕ್ತವುಳ್ಳವನಾಗಿದ್ದಾನೆ. ಈಗ ನಿಮ್ಮ ಮನೆಯಲ್ಲಿ ಸಮಾಧಾನ ಅಸ್ತಿತ್ವದಲ್ಲಿ ಇಲ್ಲದೆ ಇರಬಹುದು. ಆದರೆ ಅದನ್ನು ಅಸ್ತಿತ್ವಕ್ಕೆ ತರುವುದಕ್ಕೆ ದೇವರಿಗೆ ಸಾಧ್ಯ. ನಿನ್ನ ಶರೀರದಲ್ಲಿ ಸ್ವಸ್ತತೆ ಇಲ್ಲದೆ ಇರಬಹುದು. ಆದರೆ ಅದನ್ನು ಅಸ್ತಿತ್ವಕ್ಕೆ ತರುವುದಕ್ಕೆ ದೇವರಿಗೆ ಸಾಧ್ಯ. ನಿನ್ನ ಮನೆಯಲ್ಲಿ, ಕೆಲಸದಲ್ಲಿ ಅಥವಾ ಜೀವನ ವೃತ್ತಿಯಲ್ಲಿ ಜಯವಿಲ್ಲದೆ ಇರಬಹುದು, ಆದರೆ ಅವುಗಳನ್ನು ಅಸ್ತಿತ್ವಕ್ಕೆ ತರುವುದಕ್ಕೆ ದೇವರಿಗೆ ಸಾಧ್ಯ.

# 5

# ನಿರಾಶೆಯ ಸ್ಥಿತಿಯಲ್ಲಿ ನಿರೀಕ್ಷೆಗೆ ಇರಬೇಕಾದ ತಳಹದಿ

ನಿರಾಶೆಯ ಸ್ಥಿತಿಯಲ್ಲಿ ನಿರೀಕ್ಷೆಗೆ ಇರಬೇಕಾದ ತಳಹದಿ ಏನು? ಅದು ಭ್ರಮೆ ಮಾತ್ರವೋ? ಒಂದು ವಿಷಯದ ಮೇಲೆ ಮನಸ್ಸಿನಲ್ಲಿರುವ ಪ್ರಶ್ನೆಯೋ? ಒಂದು ಕಾರ್ಯವನ್ನು ಕುರಿತು ನಿಶ್ಚಿತವಾಗಿರುವುದೋ? ಖಚಿತವಾಗಿರುವುದಕ್ಕೆ ಪ್ರಯತ್ನಿಸುವುದು ಮತ್ತು ಖಚಿತವಾಗಿ ನೆಲೆಸುವುದು ಮನುಷ್ಯತ್ವದ ಅನುಸಂಧಾನವೋ? ಬಹಳ ಕಷ್ಟಕರವಾದ ಪರಿಸ್ಥಿತಿಯಲ್ಲಿ ನಾವು ನಿರೀಕ್ಷೆಯನ್ನು ಏಕೆ ಹೊಂದಿರಬೇಕು ಎಂಬುದಕ್ಕೆ ಸರಳವಾದ ಕಾರಣ ದೇವರು ಮತ್ತು ಆತನ ವಾಕ್ಯ.

**‘‘ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವುದು ಎಂಬುದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವುದಕ್ಕೆ ಮಾರ್ಗ ತೋರದೆ ಇರುವುದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು’’** (ರೋಮಾ 4:18).

ನಂಬುವುದಕ್ಕೆ ಕಾರಣ ಇಲ್ಲದೆ ಇದಾಗ್ಯೂ, ದೇವರು ವಾಗ್ದಾನ ಮಾಡಿದ್ದನ್ನು ಅಬ್ರಹಾಮನು ನಂಬಿದನು. ಪರಿಸ್ಥಿತಿ ಹದಗೆಟ್ಟಿದಾಗಲೂ, ಅವನು ನಂಬಿದನು. ಏಕೇ? ದೇವರು ಮಾತನಾಡಿದ್ದರಿಂದ! ‘‘ಏನು ಮಾತನಾಡಲ್ಪಟ್ಟಿತ್ತೊ ಅದರ ಅನುಸಾರವಾಗಿ!’’ ಆತನು ನಿರೀಕ್ಷೆಯಲ್ಲಿ ನಂಬಿದನು. ಆತನ ನಿರೀಕ್ಷೆಗೆ ಅದು ತಳಹದಿಯಾಗಿತ್ತು. ಪರಿಸ್ಥಿತಿಯು ನಿರಾಶಾದಾಯಕವಾಗಿದ್ದರೂ, ದೇವರು ಮಾತನಾಡಿದ್ದರಿಂದ ಅಬ್ರಹಾಮನು ನಿರಾಶೆಗೆ ವಿರುದ್ಧವಾಗಿ ನಂಬಲು ಆರಿಸಿಕೊಂಡನು.

## ನಮಗಿರುವ ನಿರೀಕ್ಷೆಗೆ ದೇವರು ಮತ್ತು ಆತನ ವಾಕ್ಯ ತಳಹದಿ ಆಗುತ್ತದೆ.

**‘‘ಯೆಹೋವನೇ ನಿನ್ನನ್ನೇ ನಿರೀಕ್ಷಿಸಿಕೊಂಡಿದ್ದೇನೆ; ನನ್ನ ಕರ್ತನೇ; ನನ್ನ ದೇವರೆ, ನೀನೇ ಸದುತ್ತರವನ್ನು ಕೊಡುವವನು’’** (ಕೀರ್ತನೆ 38:15).

**‘‘ನಾನು ಯೆಹೋವನನ್ನು ಎದುರು ನೋಡುತ್ತೇನೆ; ನನ್ನ ಪ್ರಾಣವು ಆತನನ್ನು ಕಾದುಕೊಂಡಿದ್ದೆ; ಆತನ ನುಡಿಯನ್ನು ನಿರೀಕ್ಷಿಸಿಕೊಂಡಿದ್ದೇನೆ’’** (ಕೀರ್ತನೆ 130:5).

**‘‘ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವುದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರ ಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು’’** (ರೊಮಾಪುರ 15:4).

ನಮ್ಮ ನಿರೀಕ್ಷೆಗೆ ದೇವರು ಕಾರಣನಾಗಿದ್ದಾನೆ. ಮೂಲವಾಗಿದ್ದಾನೆ ಮತ್ತು ಬಲವಾಗಿದ್ದಾನೆ. ನಮ್ಮ ನಿರೀಕ್ಷೆಗೆ ಆತನ ವಾಕ್ಯವು ತಳಹದಿಯಾಗುತ್ತದೆ. ದೇವರ ವಾಕ್ಯದಿಂದ ನಮ್ಮ ಹೃದಯಕ್ಕೆ ಸಿಕ್ಕುವ ತಾಳ್ಮೆ ಮತ್ತು ಆದರಣೆಯಿಂದ ನಾವು ನಮ್ಮ ನಿರೀಕ್ಷೆಯನ್ನು ಕಾಪಾಡಿಕೊಳ್ಳುತ್ತೇವೆ.

## ಭವಿಷ್ಯಕ್ಕಾಗಿ ನಿರೀಕ್ಷೆ

ಇದುವರೆಗೂ ನಾವು ಓದಿದ ಎಲ್ಲಕ್ಕೂ ಕಾರ್ಯರೂಪಕ ಬದಿಯಿಂದ ನೋಡೋಣ, ಇದನ್ನು ಓದುತ್ತಿರುವ ಕೆಲವರು ''ಭವಿಷ್ಯಕ್ಕಾಗಿ ನನಗೆ ಯಾವ ನಿರೀಕ್ಷೆಯೂ ಇಲ್ಲ'' ಅಥವಾ ''ನಾನು ಬಹಳ ದೂರ ಹೋಗುತ್ತೇನೆ ಎಂದು ನನಗೆ ಅನಿಸುವುದಿಲ್ಲ'' ನನ್ನ ಜೀವನದಲ್ಲಿ ಅಂತ ದೊಡ್ಡದೇನು ಸಂಭವಿಸುವುದಕ್ಕೆ ಹೋಗುವುದಿಲ್ಲ ಎಂದು ಹೇಳುತ್ತಿರಬಹುದು. ದೇವರಿಂದ ಮತ್ತು ಆತನ ವಾಕ್ಯದಿಂದ, ನಾವು ಭವಿಷ್ಯಕ್ಕೆ ನಿರೀಕ್ಷೆಯನ್ನು ಹೊಂದಿಕೊಳ್ಳಬಹುದು ಎಂದು ನಾನು ನಿನಗೆ ತಿಳಿಯಪಡಿಸುತ್ತೇನೆ. ಆತನ ವಾಕ್ಯ ಹೇಳುತ್ತದೆ.

**ಆದರೆ ಬರೆದಿರುವ ಪ್ರಕಾರ: ''ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ದ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ. ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ''** (1 ಕೊರಿಂಥ 2;9).

ಭವಿಷ್ಯಕ್ಕಾಗಿ ನಮಗೆ ನಿರೀಕ್ಷೆ ಇದೆ. ಭವಿಷ್ಯದಲ್ಲಿ ನಾವು ಕೆಲವು ಆಶ್ಚರ್ಯಕರವಾದ ಸಂಗತಿಗಳನ್ನು ನೋಡುತ್ತೇವೆ ಎನ್ನುವ ಭರವಸೆ ನಮಗಿದೆ. ಏಕೆ? ಏಕೆಂದರೆ ಆತನನ್ನು ಪ್ರೀತಿಸುವವರಿಗೆ ದೇವರು ಅಂತಹ ಸಂಗತಿಗಳನ್ನು ಸಿದ್ಧ ಮಾಡಿದ್ದಾನೆಂದು ದೇವರ ವಾಕ್ಯವು ಹೇಳುತ್ತದೆ.

**ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ** (ಯೆರೆಮೀಯ 29:11).

ದೇವರ ವಾಕ್ಯವು - ನಮ್ಮ ನಿರೀಕ್ಷೆಗೆ ತಳಹದಿಯಾಗಿದೆ. ಇನ್ನೂ ಉತ್ತಮವಾದ ಭವಿಷ್ಯಕ್ಕಾಗಿ ನಾವು ನಿರೀಕ್ಷಿಸಬಹುದು, ನಮ್ಮ ಈಗಿನ ಪರಿಸ್ಥಿತಿಯು ನಮ್ಮ ಕೊನೆಯ ನಿರ್ದಿಷ್ಟ ಸ್ಥಾನವನ್ನು ಸೂಚಿಸುವುದಿಲ್ಲ. ದೇವರು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿದಂತೆ ನಮ್ಮ ಭವಿಷ್ಯವು ಬಲವಾಗಿ, ಸಫಲವಾಗಿ ಮತ್ತು ಸುರಕ್ಷಿತವಾಗಿ

ಇರುತ್ತದೆಂದು ನಮಗೆ ನಿರೀಕ್ಷೆ ಇದೆ. ನಮ್ಮ ಈಗಿನ ಪರಿಸ್ಥಿತಿಯು ನಮ್ಮನ್ನು ಕೆಳಗೆ ಇಡಲು ನಾವು ಅನುಮತಿಸುವುದಿಲ್ಲ.

## ವಿಜಯಿ ಅಥವಾ ಸಫಲವಾಗುವುದಕ್ಕೆ ನಿರೀಕ್ಷೆ

ನಿಮ್ಮಲ್ಲಿ ಕೆಲವರಿಗೆ ನಕಾರಾತ್ಮಕ ಆಲೋಚನೆಗಳು ಇರಬಹುದು ಮತ್ತು ಜೀವಿತದಲ್ಲಿ ನಾನು ವಿಜಯಿಯಾಗುತ್ತೇನಾ ಎಂದು ಆಶ್ಚರ್ಯಪಡುತ್ತಿರಬಹುದು ನೀನು ಪ್ರಯತ್ನ ಮಾಡಿದ ಎಲ್ಲವೂ ಸೋಲಿನಲ್ಲಿ ಕೊನೆಗೊಂಡಿರಬಹುದು ಮತ್ತು ಇದುವರೆಗೂ ಯಾವುದರಲ್ಲಿಯೂ ಜಯ ಹೊಂದುವುದಕ್ಕೆ ನಿನಗೆ ಸಾಧ್ಯವಾಗದೆ ಇರಬಹುದು. ವಾಕ್ಯ ಏನು ಹೇಳುತ್ತದೆಯೋ ಅದನ್ನು ನೀನು ನಂಬಬೇಕು;

**''ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ, ಧರ್ಮ ನಿಂದಕರೊಡನೆ ಕೂತುಕೊಳ್ಳದೆ, ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ, ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು, ಅಂಥ ಮರವು ತಕ್ಕ ಕಾಲದಲ್ಲಿ ಫಲ ಕೊಡುತ್ತದಲ್ಲಾಚ ಅದರ ಎಲೆ ಬಾಡುವುದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವುದು''** (ಕೀರ್ತನೆ 1:1:3).

ನಿನ್ನನ್ನೇ ಒಂದು ಫಲಭರಿತವಾದ ಮರದ ಹಾಗೇ ಕಲ್ಪಿಸಿಕೋ. ನೀನು ಮಾಡಿದ ಎಲ್ಲದರಲ್ಲಿಯೂ ಅಭಿವೃದ್ಧಿ ಹೊಂದುವ ವ್ಯಕ್ತಿಯಂತೆ ನಿನ್ನನ್ನೇ ಕಾಣು. ಇದು ನಿನ್ನ ಜೀವನದಲ್ಲಿ ಕುರಿತಾದ ದೇವರ ವಾಕ್ಯವಾಗಿದೆ. ಮತ್ತು ದೇವರು ನಿನಗೆ ಮಾಡಬೇಕೆಂದಿರುವುದನ್ನು ಯಾವ ಪರಿಸ್ಥಿತಿಯೂ ಕದ್ದುಕೊಳ್ಳುವುದಕ್ಕೆ ಬಿಡಬೇಡ.

## ನಿನ್ನ ಕನಸುಗಳನ್ನು ನೆರವೇರಿಸಿಕೊಳ್ಳುವುದಕ್ಕೆ ನಿರೀಕ್ಷೆ

ನಿಮ್ಮಲ್ಲಿ ಕೆಲವರು ನಿಮ್ಮ ಕನಸುಗಳನ್ನು ನೆರವೇರಿಕೊಳ್ಳಲಾಗದೆ ನಿರೀಕ್ಷೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿರಬಹುದು. ದೇವರ ವಾಕ್ಯವು ಹೇಳುತ್ತದೆ.

**''ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು.''**

ನನ್ನ ಕನಸುಗಳನ್ನು ನಾನು ಮುಟ್ಟುವುದಕ್ಕೆ ಆಗುವುದೇ ಇಲ್ಲವೇನೋ ಅನ್ನುವ ಪರಿಸ್ಥಿತಿಗಳಲ್ಲಿ ನಾನಿದ್ದೆ. ನಾನು ಬೆಳೆಯುತ್ತಿರುವಾಗ ಪ್ರಪಂಚದಲ್ಲಿರುವ ರಾಷ್ಟ್ರಗಳಿಗೆ ಪರಿಣಾಮಕಾರಿಯಾಗುವಂತಹ ಬಲವಾದ ಸಭೆಯನ್ನು ಬೆಂಗಳೂರು ಪಟ್ಟಣದಲ್ಲಿ ಸ್ಥಾಪಿಸಬೇಕೆಂಬ ಕನಸು ನನಗೆ ಇತ್ತು ಎಂಬುದನ್ನು ನಾನು ನೆನೆಸಿಕೊಳ್ಳುತ್ತೇನೆ. ಅನೇಕ ಸಂಗತಿಗಳು ನಡೆದವು ಮತ್ತು ನಾನೇ ಅಂತಹ ಪರಿಸ್ಥಿತಿಗಳ ಮಧ್ಯೆ ಇದ್ದುದ್ದರಿಂದ

ಇನ್ನು ನನ್ನ ಕನಸುಗಳನ್ನು ನೆರವೇರಿಸಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವ ಆಲೋಚನೆಗಳು ನನಗೆ ಬಂದಿತು. ಅವೆಲ್ಲವೂ ಕನಸಾಗಿಯೇ ಉಳಿಯುತ್ತವೆ ಎಣಿಸಿತು. ನಾನು ಅದರೊಳಗೆ ಕಾಲಿಡುವುದಕ್ಕಾಗುವುದಿಲ್ಲ ಎಂದು ತೋರಿತು. ದೇವರು ನನಗೆ ಭವಿಷ್ಯ ಮತ್ತು ನಿರೀಕ್ಷೆಯನ್ನು ''ಕೊಡುತ್ತಾನೆ ಎಂದೂ, ಮತ್ತು ಆತನು ಸಿದ್ದ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ. ಕಿವಿ ಕೇಳಲಿಲ್ಲ'' ಎಂದು ದೇವರ ವಾಕ್ಯದಲ್ಲಿ ಹೇಳಿರುವುದರಿಂದ ನಾನು ನನ್ನ ನಿರೀಕ್ಷೆಯನ್ನು ಸಜೀವವಾಗಿಟ್ಟುಕೊಂಡೆ. ನಾನು ಆತನಲ್ಲಿ ಸಂತೋಷಿಸಿದರೆ, ಆತನು ನನ್ನ ಹೃದಯದ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ ಎಂತಲೂ ದೇವರ ವಾಕ್ಯ ಹೇಳುತ್ತದೆ. ನನ್ನ ಪರಿಸ್ಥಿತಿ ಕೆಟ್ಟದ್ದರಿಂದ ಇನ್ನೂ ಕೆಟ್ಟದಾಗಿ ಹೋಗುತ್ತಿದ್ದರೂ ಆತನ ವಾಕ್ಯ ಬದಲಾಗದೆ ಉಳಿದಿದೆ. ನಾನು ಆತನ ವಾಕ್ಯವನ್ನು ಹಿಡಿದುಕೊಂಡೆ. ಆತನ ವಾಕ್ಯವು ನನ್ನ ನಿರೀಕ್ಷೆಗೆ ತಳಹದಿಯಾಯಿತು. ಆ ಕನಸು ಈಗ ನನಸಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಹಾಲೆಲ್ಲೂಯ!

## ನಿಮ್ಮ ಮಕ್ಕಳಿಗಾಗಿ ನಿರೀಕ್ಷೆ

ನಿಮ್ಮಲ್ಲಿ ಕೆಲವರು ನಿಮ್ಮ ಮಕ್ಕಳ ಬಗ್ಗೆ ನಿರೀಕ್ಷೆಯನ್ನು ಕಳೆದುಕೊಳ್ಳುತ್ತಿರಬಹುದು. ನೀವು ದೇವರ ವಾಕ್ಯದಿಂದ ಅವರಿಗೆ ಚೆನ್ನಾಗಿ ಹೇಳಿಕೊಟ್ಟು ಅವರನ್ನು ಪಳಗಿಸಿದ್ದರೂ, ಜೀವಿತದಲ್ಲಿ ಅವರು ಇಂಥ ಮಟ್ಟಕ್ಕೆ ಹೋಗುತ್ತಾರೆ ಎಂದು ನೀನು ಎಂದಿಗೂ ಊಹಿಸದೆ ಇರುವ ಕಾರ್ಯಗಳಲ್ಲಿ ಅವರು ಇಂದು ಇರಬಹುದು. ಬಹುಶಃ ಅವರು ವಿದ್ಯಾಭ್ಯಾಸವನ್ನು ಬಿಟ್ಟು ಬಿಟ್ಟಿರಬಹುದು, ಅಥವಾ ಮದ್ಯಪಾನ ಮತ್ತು ಮಾದಕ ವಸ್ತುಗಳ ಚಟಕ್ಕೆ ಬಿದ್ದಿರಬಹುದು. ನಿಮ್ಮ ಪಳಗಿಸುವಿಕೆ ಎಲ್ಲಾ ಪ್ರಯೋಜನವಿಲ್ಲದೆ ಹೋಯಿತು ಎಂದು ಅನ್ನಿಸಬಹುದು. ಇಷ್ಟು ವರ್ಷ ಅವರಿಗಾಗಿ ಪಟ್ಟ ಕಷ್ಟವೆಲ್ಲಾ ವ್ಯರ್ಥವಾಯಿತಲ್ಲಾ ಎಂದು ನೀವು ಅಂದುಕೊಳ್ಳುತ್ತಿರಬಹುದು. ನಿಮ್ಮ ಮಕ್ಕಳಿಗಾಗಿ ಇರುವ ನಿರೀಕ್ಷೆಯನ್ನು ಬಿಟ್ಟು ಬಿಡುವ ಅಂಚಿನಲ್ಲಿ ನೀವಿರಬಹುದು. ''ನಿರೀಕ್ಷೆಯನ್ನು ಬಿಟ್ಟು ಬಿಡಬೇಡಿರಿ'' ಎಂದು ಹೇಳುತ್ತಾ ನಿಮ್ಮನ್ನು ಪ್ರೋತ್ಸಾಯಿಸುತ್ತೇನೆ. ದೇವರ ವಾಕ್ಯ ಹೇಳುತ್ತದೆ:

**''ಯೆಹೋವಿಗೆ ಸ್ತೋತ್ರ. ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ, ಆತನ ಆಜ್ಞೆಗಳಲ್ಲಿ ಅತ್ಯಾನಂದ ಪಡುವನೋ ಅವನೇ ಧನ್ಯನು. ಅವನ ಸಂತಾನನು ಲೋಕದಲ್ಲಿ ಬಲಿಷ್ಟವಾಗುವುದು. ನೀತಿವಂತನ ಶುಭ ಹೊಂದುವು''** (ಕೀರ್ತನೆ 112:1.2).

''ನಿನ್ನ ವಾಕ್ಯದಲ್ಲಿ ನಾನು ನಿರೀಕ್ಷಿಸಿಕೊಂಡಿದ್ದೇನೆ ಎಂದು ನೀವು ಹೇಳಬಹುದು. ನಿನ್ನ ಮಕ್ಕಳು ಈ ಲೋಕದಲ್ಲಿ ಬಲಿಷ್ಠವಾಗುವುದು'' ಎಂದು ನಿನ್ನ ವಾಕ್ಯ ಹೇಳುತ್ತದೆ

ಎಂದು ಹೇಳಬಹುದು. ಅಂದರೆ ನಿನ್ನ ಮಕ್ಕಳು ಈ ಲೋಕದಲ್ಲಿ ಏನಾದರೊಂದು ಆಗುತ್ತಾರೆ ಎಂದರ್ಥ. ದೇವರ ರಾಜ್ಯಕ್ಕಾಗಿ ಅವರು ಏನಾದರೂ ಮಾಡುತ್ತಾರೆ. ಈ ಲೋಕದಲ್ಲಿ ಅವರು ವ್ಯರ್ಥವಾಗಿ ಹೋಗುವುದಿಲ್ಲ. ಅವರು ದೇವರಿಗೆ ಪರಿಣಾಮಕಾರಿಯಾಗಿರುತ್ತಾರೆ.

**''ನಿನ್ನ ಮಕ್ಕಳೆಲ್ಲರೂ ಯೆಹೋವನಿಂದ ಶಿಕ್ಷಿತರಾಗಿರುವರು, ಅವರಿಗೆ ಅಧಿಕ ಸುಕ್ಷೇಮವಾಗುವುದು''** (ಯೆಶಾಯ 54:13).

ಈ ಮೇಲಿನ ವಚನ ನಿಮ್ಮ ನಿರೀಕ್ಷೆಗೆ ತಳಹದಿಯಾಗಿರಲಿ. ನಿರೀಕ್ಷಿಸುತ್ತಾ ಇರಿ, ನೀವು ಏನು ಹೇಳುತ್ತಿದ್ದೀರಿ ಅದಕ್ಕೆ ನಿನ್ನ ಮಗುವು ಇಂದು ಕಿವಿಗೊಡದೆ ಇರಬಹುದು ಆದರೆ, ನಿರೀಕ್ಷೆ ವಿರೋಧವಾಗಿದ್ದರೂ ದೇವರ ವಾಕ್ಯದಲ್ಲಿ ನೀನು ನಿರೀಕ್ಷಿಸಬಹುದು.

## ಸ್ವಸ್ಥವಾಗುವುದಕ್ಕೆ ನಿರೀಕ್ಷೆ

ನಿಮ್ಮಲ್ಲಿ ಕೆಲವರು ವ್ಯಾಧಿಯಿಂದಲೂ ರೋಗದಿಂದಲೂ ಕಷ್ಟಪಡುತ್ತಿರಬಹುದು ಮತ್ತು ವೈದ್ಯರು ನಿರೀಕ್ಷೆಯೇ ಇಲ್ಲ ಎಂದು ನಿಮಗೆ ಹೇಳಿರಬಹುದು. ಇಲ್ಲಿ ದೇವರ ವಾಕ್ಯ ಏನು ಹೇಳುತ್ತದೆ ಎಂದರೆ;

**''ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ, ಸಮಸ್ತ ರೋಗಗಳನ್ನು ವಾಸಿ ಮಾಡುವವನೂ''** (ಕೀರ್ತನೆ 103:3).

ಇದೇ ನಿಮಗಿರುವ ನಿರೀಕ್ಷೆ. ನಿಮ್ಮ ನಿರೀಕ್ಷೆಯನ್ನು ಸಜೀವವಾಗಿ ಇಟ್ಟುಕೊಳ್ಳಿ. ದೇವರ ವಾಕ್ಯದಲ್ಲಿ ಹೇಳುವಂತೆ ನೀವು ಸ್ವಸ್ಥರಾಗಿದ್ದೀರೆಂದೂ ಮತ್ತು ಚೆನ್ನಾಗಿದ್ದೀರೆಂದೂ ಚಿತ್ರಿಸಿಕೊಳ್ಳಿರಿ.

**''ನೀನೇ ಬುದ್ಧಿವಂತನು ಎಂದೆಣಿಸದೆ, ಯೆಹೋವನಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದು ಬಿಡು. ಇದರಿಂದ ನಿನ್ನ ದೇಹಕ್ಕೆ ಆರೋಗ್ಯವೂ, ಎಲುಬುಗಳಿಗೆ ಸಾರವೂ ಉಂಟಾಗುವುದುಡ''** (ಜ್ಞಾನೋಕ್ತಿ 3:7, 8),

ನಿನಗೆ ದೇವರಲ್ಲಿರುವ ಭಯಭಕ್ತಿ ನಿನ್ನ ಶರೀರಕ್ಕೆ ಸ್ವಸ್ಥತೆಯನ್ನು ತರುತ್ತದೆ.

ದೇವರು ಮತ್ತು ಆತನ ವಾಕ್ಯದಿಂದ ನಿರಾಶೆಯ
ಪರಿಸ್ಥಿತಿಯಲ್ಲೂ ನಾವು ನಿರೀಕ್ಷಿಸಬಹುದು

# 6

# ನಿರಾಶೆಯ ಪರಿಸ್ಥಿತಿಗಳ ಮಧ್ಯದಲ್ಲಿ ನಾನೇನು ಮಾಡಲಿ?

**‘‘(ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರಗಳಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ, ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವುದು ಎಂಬುದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವುದಕ್ಕೆ ಮಾರ್ಗ ತೋರದೆ ಇರುವುದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು. ಅವನು ಹೆಚ್ಚು ಕಡಿಮೆ ನೂರು ವರ್ಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದುಹೋಯಿತು ಎಂದು ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ. ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲ ಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದನವನ್ನು ನೆರವೇರಿಸುವುದಕ್ಕೆ ಸಮರ್ಥನೆಂದು ಪೂರಾ ಭರವಸೆ ಇಟ್ಟು ಧೃಢ ನಂಬಿಕೆಯುಳ್ಳವನಾದನು.)’’** (ರೋಮಾಪುರ 4:17-21).

ದೇವರು ನಮ್ಮ ನಿರಾಶೆಯ ಪರಿಸ್ಥಿತಿಯನ್ನು ತಲೆಕೆಳಗೆ ಮಾಡುವುದಕ್ಕೆ ನಾನು ಏನು ಮಾಡಬೇಕು? ಅಬ್ರಹಾಮನ ಜೀವನದಿಂದ ನಾವು ಏನು ಪಾಠ ಕಲಿಯಬಹುದು? ನಿರಾಶೆಯ ಸ್ಥಿತಿಯನ್ನು ದೇವರು ತಲೆಕೆಳಗೆ ಮಾಡಲು ಅವನು ಏನು ಮಾಡಿದನು? ನಿರೀಕ್ಷೆಗೆ ಆಸ್ಪದವಿಲ್ಲದಿದ್ದರೂ ವಾಗ್ದಾನದ ಪ್ರಕಾರವೇ ನಾನು ಆಗುತ್ತೇನೆ ಎಂದು ಅಬ್ರಹಾಮನು ನಿರೀಕ್ಷಿಸಿ ನಂಬಿದನು ಎಂದು ದೇವರ ವಾಕ್ಯ ಹೇಳುತ್ತದೆ (ರೋಮ 4:18). ದೇವರು ಏನೆಲ್ಲಾ ಹೇಳಿದ್ದಾನೋ ಅದೆಲ್ಲಾ ನೆರವೇರುವುದು ಎಂದು ನೀನು ನಂಬುತ್ತಿಯೋ? ಉದಾ: ‘‘ನೀನು ಏನು ಮಾಡಿದರೂ ಅಭಿವೃಧಿ ಹೊಂದುವಿ’’ ಎಂದು ದೇವರ ವಾಕ್ಯ ಹೇಳುತ್ತದೆ ಮತ್ತು ನೀನು ಅದನ್ನು ನಂಬಬೇಕು. ನೀನು ನಂಬುತ್ತೀಯಾ?

## ದೇವರು ಹೇಳಿದ ಪ್ರಕಾರವೇ ನಾನು ಆಗುತ್ತೇನೆ ಎನ್ನುವ ನಿರೀಕ್ಷೆಯಲ್ಲಿ ನಂಬಿಕೆ ಇಡು.

ದೇವರು ಮತ್ತು ಆತನ ವಾಕ್ಯ ಒಂದಾಗಿದೆ. ಆತನ ವಾಕ್ಯದಲ್ಲಿ ನಂಬಿಕೆ ಇಡುವಾಗ ದೇವರಲ್ಲಿ ನಂಬಿಕೆ ಇಟ್ಟಂತಾಗುವುದು. ನಿರಾಶೆ ಇದ್ದರೂ ನೀನು ನಂಬಿಕೆಯನ್ನು ಹೊಂದಿರಬೇಕು. ಆದ್ದರಿಂದ ಅದು ನಿರಾಶಾದಾಯಕವಾಗಿ ಕಂಡರೂ ದೇವರ ವಾಗ್ದಾನದ

ಪ್ರಕಾರವೇ ನಾನು ಆಗುತ್ತೇನೆ ಎಂದು ನೀನು ನಂಬಬೇಕು. ನಿರೀಕ್ಷೆಯನ್ನು ಬಿಟ್ಟು ಕೊಡಬೇಡ.

## ನಿರಾಶಾದಾಯಕ ಸ್ಥಿತಿಯು ನಿನ್ನ ನಂಬಿಕೆಯನ್ನು ಜಡ ಮಾಡುವುದಕ್ಕೆ ಬಿಡಬೇಡ

''ಅವನು ಹೆಚ್ಚು ಕಡಿಮೆ ನೂರು ವರ್ಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದು ಹೋಯಿತು ಎಂದು ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ (ರೋಮಾಪುರ 4:19). ತನ್ನ ದೇಹದ ಸ್ಥಿತಿಯನ್ನೂ ಮತ್ತು ತನ್ನ ಸುತ್ತಲಿನ ಸನ್ನಿವೇಶವನ್ನು ನೋಡಿಯೂ ಅವನು ತನ್ನ ನಂಬಿಕೆ ಬಲಹೀನವಾಗುವುದಕ್ಕೆ ಬಿಡಲಿಲ್ಲ. ಎಂಥಾ ನಿರಾಶಾದಾಯಕ ಪರಿಸ್ಥಿತಿಯೂ ನಿಮ್ಮ ನಂಬಿಕೆಯನ್ನು ಬಲಹೀನ ಮಾಡುವುದಕ್ಕೆ ಬಿಡಬೇಡಿ. ಸುತ್ತಲಿನ ಸ್ಥಿತಿಯನ್ನು ನೋಡಿ ಅದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ'' ಎನ್ನಬೇಡ.

ಏನಾದರೂ, ಸನ್ನಿವೇಶವನ್ನು ನೀನು ನಿರಾಕರಿಸಬೇಕೆಂದು ಅದರ ಅರ್ಥವಲ್ಲ. ನಿನ್ನ ಪರಿಸ್ಥಿತಿಯ ಸತ್ಯಸ್ಥಿತಿಯು ನಿನ್ನ ನಂಬಿಕೆಯನ್ನು ಬಲಹೀನಗೊಳಿಸುವುದಕ್ಕೆ ಬಿಡಬೇಡ. ಅದರ ಬದಲು ನಿನ್ನ ಕಲ್ಪನೆಯ ''ಬಟ್ಟೆಯ'' ಮೇಲೆ ನಿನ್ನ ವಾಗ್ದಾನದ ಫಲಿತಾಂಶವನ್ನು ನೀನು ''ಚಿತ್ರಿಸಬೇಕು''. ನೀನು ಸಂಪೂರ್ಣವಾಗಿ ವಾಸಿಯಾದಂತೆ, ಜೀವನದಲ್ಲಿ ಏಳಿಗೆಯಾದಂತೆ, ಮದುವೆ ಜೀವಿತ ಗುಣವಾಗಿ, ಸರಿಯಾಗಿರುವಂತೆ, ನಿನ್ನ ಮಕ್ಕಳು ದೇವರ ಸೇವೆ ಮಾಡುತ್ತಾ, ಆತನ ಮಾರ್ಗದಲ್ಲಿ ನಡೆಯುತ್ತಿದ್ದಾರೆಂದು ನೀನು ನೋಡು. ದೇವರ ವಾಕ್ಯದ ಮೇಲೆ ಆಧಾರವಾಗಿರುವ ಅಂತಹ ಚಿತ್ರವನ್ನು ಚಿತ್ರಿಸಿ ಅದನ್ನು ಆಗಾಗ್ಗೆ ನೋಡು.

ಒಂದು ರಾತ್ರಿ, ದೇವರು ಅಬ್ರಾಮನನ್ನು ಅವನ ಗುಡಾರದಿಂದ ಹೊರಗೆ ಕರೆದುಕೊಂಡು ಬಂದು ಆಕಾಶದಲ್ಲಿರುವ ನಕ್ಷತ್ರಗಳನ್ನು ನೋಡುವುದಕ್ಕೆ ಹೇಳಿದನು. ''ನಿನ್ನ ಸಂತಾನವು ಅಷ್ಟಾಗುವದು'' ಎಂದು ದೇವರು ಅವನಿಗೆ ಹೇಳಿದನು? (ಆದಿಕಾಂಡ 15:5) ಅದರ ನಂತರ ದೇವರ ವಾಗ್ದಾನದ ''ಚಿತ್ರ'' ಅಬ್ರಹಾಮನ ಮನಸ್ಸಿನಲ್ಲಿ ಇತ್ತು. ಆಕಾಶದಲ್ಲಿರುವ ಅಸಂಖ್ಯಾತ ನಕ್ಷತ್ರಗಳಷ್ಟು ತನ್ನ ಸಂತಾನವನ್ನು ''ಕಾಣಲು'' ಆತನು ಶಕ್ತನಾಗಿದ್ದನು. ಪ್ರತಿ ಸಾರಿಯೂ ಅಬ್ರಹಾಮನು ತನ್ನ ದೇಹದ ಸ್ಥಿತಿಯನ್ನು ಮತ್ತು ತನ್ನ ಹೆಂಡತಿಯ ಸತ್ತು ಹೋದ ಗರ್ಭವನ್ನು ನೋಡುವಾಗ, ಆಕಾಶದಲ್ಲಿರುವ ಅಸಂಖ್ಯಾತ ನಕ್ಷತ್ರಗಳು ಮತ್ತು ಭೂಮಿಯಲ್ಲಿರುವ ಧೂಳಿನಷ್ಟು

ಸಂತಾನವನ್ನು ಕೊಡುವೆನೆಂದು ಹೇಳಿದ ದೇವರ ವಾಗ್ದಾನವನ್ನು ಜ್ಞಾಪಕಪಡಿಸಿಕೊಳ್ಳುತ್ತಿದ್ದನು.

ಅನೇಕ ಸಲ, ನಾನು ಸಾವಿರಾರು ಜನಗಳಿಗೆ ದೇವರ ವಾಕ್ಯವನ್ನು ಸಾರುತ್ತಿದ್ದೇನೆ ಎನ್ನುವ ಚಿತ್ರವನ್ನು ನನ್ನಲ್ಲಿ ಚಿತ್ರಿಸಿಕೊಳ್ಳುತ್ತೇನೆ. ನಮ್ಮ ಪಟ್ಟಣದ ಐದು ಬೇರೆ ಬೇರೆ ಸ್ಥಳಗಳಲ್ಲಿ ನಮ್ಮ ಒಂದೊಂದು ಸ್ಥಳೀಯ ಸಭೆಗಳು ಸಾವಿರಾರು ಜನರ ಗುಂಪುಗಳಿಂದ ತುಂಬಿರುವಂತೆ ನಾನು ಚಿತ್ರಿಸಿಕೊಳ್ಳುತ್ತೇನೆ. ನಮ್ಮ ಕೊನೆಯ ನಿರ್ದಿಷ್ಟ ಸ್ಥಾನದ ಚಿತ್ರ ನನ್ನ ಮನಸ್ಸಿನಲ್ಲಿರುವುದರಿಂದ, ಭಾನುವಾರದ ಬೆಳಗ್ಗೆ ಸಭೆಯಲ್ಲಿ ಇರುವ ಬರಿದಾದ ಕುರ್ಚಿಗಳ ದೃಶ್ಯ ನನ್ನ ನಂಬಿಕೆಯನ್ನು ಬಲಹೀನಗೊಳಿಸುವುದಿಲ್ಲ. ನಿನ್ನ ಈಗಿನ ಪರಿಸ್ಥಿತಿಯು ಏನೇ ಆಗಿದ್ದರೂ, ನಿನ್ನ ಕೊನೆಯ ನಿರ್ದಿಷ್ಟ ಸ್ಥಾನದ ಚಿತ್ರಣವನ್ನು ಹೊಂದುಕೊಂಡು ನಿರೀಕ್ಷೆಯನ್ನು ಮುಂದುವರೆಸು.

## ದೃಢನಿರ್ಧಾರವನ್ನು ಮತ್ತು ತಾಳ್ಮೆಯನ್ನು ಪ್ರದರ್ಶಿಸು

''ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ" ಎಂಬ ಇನ್ನೊಂದು ವಿಷಯವನ್ನು ನಾವು ಅಬ್ರಹಾಮನ ಜೀವಿತದಲ್ಲಿ ನೋಡುತ್ತೇವೆ. (ರೋಮಾಪುರ 4:20) ದೇವರ ವಾಗ್ದಾನದಿಂದ ಅವನು ಎಡವಲಿಲ್ಲ. ಅವನು ದೃಢಸಂಕಲ್ಪವನ್ನು ಮತ್ತು ತಾಳ್ಮೆಯನ್ನು ನಿರೂಪಿಸಿದನು. ನಿರೀಕ್ಷೆಯ ಜೊತೆಗೆ, ದೃಢತೆಯಿಂದ ಮತ್ತು ತಾಳ್ಮೆಯಿಂದ ಇರುವುದು ಬಹಳ ಮುಖ್ಯವಾಗಿದೆ.'' ''ಆದರೆ ಕಾಣದಿರುವುದನ್ನು ನಾವು ಎದುರು ನೋಡುವವರಾಗಿದ್ದರೆ ತಾಳ್ಮೆಯಿಂದ ಕಾದುಕೊಂಡಿರುವೆವು'' ಎಂದು (ರೋಮಾಪುರ 4:25) ಹೇಳುತ್ತದೆ. ನಮ್ಮಲ್ಲಿ ಅನೇಕರು ಅನೇಕ ವಿಷಯಗಳನ್ನು ನಿರೀಕ್ಷಿಸಿಕೊಂಡಿದ್ದಾಗ್ಯೂ ಅವೆಲ್ಲ ತಕ್ಷಣವೇ ಬೇಕೆಂದು ನಾವು ಹವಣಿಸುತ್ತೇವೆ. ಕಾಣದಿರುವುದನ್ನು ನಾವು ಎದುರು ನೋಡುತ್ತಾ ತಾಳ್ಮೆಯಿಂದ ಕಾದಿರಬೇಕೆಂದು ದೇವರ ವಾಕ್ಯ ನಮಗೆ ತಿಳಿಯಪಡಿಸುತ್ತದೆ. ಸುಲಭವಾಗಿ ಬಿಟ್ಟು ಬಿಡಬೇಡ. ಸ್ವಲ್ಪ ತಾಳ್ಮೆಯಿಂದ ಕಾದಿರು. ಅಪೋಸ್ತಲನಾದ ಪೌಲನು ಹೇಳುತ್ತಾನೆ.

''**ನಾವು ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನು ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ ನಿಮ್ಮ ಸ್ಥೈರಣೆಯನ್ನು ನಮ್ಮ ತಂದೆಯಾದ ದೇವರ ಮುಂದೆ**'' (1 ಥಸಲೋನಿಕ 1:3).

ನಿರೀಕ್ಷೆ ತಾಳ್ಮೆಯಾಗಿದೆ! ದೇವರ ವಾಕ್ಯದ ಮೇಲೆ ಆಧಾರವಾಗಿರುವ ಯಥಾರ್ಥವಾದ ತಾಳ್ಮೆಯೇ ನಿರೀಕ್ಷೆಯಾಗಿದೆ.

**‘‘ಯೆಹೋವನ ರಕ್ಷಣ ಕಾರ್ಯವನ್ನು ಎದುರುನೋಡುತ್ತಾ ಶಾಂತವಾಗಿ ಕಾದುಕೊಂಡಿರುವುದು ಒಳ್ಳೆದು’’** (ಪ್ರಲಾಪ 3:26).

ಯಾವಾಗ ನಿನಗೆ ಸತ್ಯವಾದ ನಿರೀಕ್ಷೆ ಇದೆ. ಅಲ್ಲಿ ನಿಶ್ಯಬ್ಧತೆ, ಪ್ರಶಾಂತತೆ ತಿಳುವಳಿಕೆ ಇರುತ್ತದೆ. ಅದು ನಡೆಯಲು ಹೋಗುತ್ತದೆ ಎಂದು ನಿನಗೆ ಗೊತ್ತು. ನಿನಗೆ ಬೇಕಾದದ್ದನ್ನು ಪಡೆಯಲು ಎಲ್ಲರನ್ನೂ ತಳ್ಳದೆ ಶಾಂತಿಯಿಂದಲೂ, ಗಲಿಬಿಲಿಗೊಳ್ಳದೆಯೂ, ಉದ್ರೇಕಗೊಳ್ಳದೆಯೂ ಇರುವಿ. ನಿಜವಾಗಿಯೂ ಹೇಳುವುದಾದರೆ ನೀನು ನಂಬಿರುವುದು ನೆರವೇರುತ್ತದೆಂದು ನಿನಗೆ ಗೊತ್ತಿರುವುದರಿಂದ ನೀನು ಶಾಂತವಾಗಿರುತ್ತಿ. ನೀನು ದೃಢವಾಗಿದ್ದು ತಾಳ್ಮೆಯಿಂದ ಕಾಯುತ್ತಿ. ದೃಢಸಂಕಲ್ಪವು ಸ್ಥಿರವಾಗಿ ದೇವರ ವಾಕ್ಯಕ್ಕೆ ವಿಧೇಯವಾಗಿರುವುದನ್ನು ನಿರೂಪಿಸುತ್ತದೆ. ಸುಲಭವಾದ ಹಾದಿಯನ್ನು ತೆಗೆದುಕೊಳ್ಳಬೇಡಿ. ಅದು ವಿಷಯಗಳನ್ನು ಮತ್ತಷ್ಟು ಗೊಂದಲಗೊಳಿಸುತ್ತದೆ.

## ನಿಮ್ಮ ಸಂತೋಷವನ್ನು ಇಟ್ಟುಕೊಂಡು ದೇವರಿಗೆ ಸ್ತೋತ್ರ ಸಲ್ಲಿಸಿ

ಅಬ್ರಹಾಮನು ದೇವರಿಗೆ ಮಹಿಮೆಯನ್ನು ಸಲ್ಲಿಸಿದನು (ರೋಮಾ 4:20). ನಿನಗೆ ನಿರೀಕ್ಷೆ ಇದ್ದಾಗ ಸಂತೋಷ ಇರುತ್ತದೆ. ದೇವರ ವಾಕ್ಯವು ಏನು ಹೇಳುತ್ತದೋ ಅದರ ಮೇಲೆ ನಿನಗೆ ನಿರೀಕ್ಷೆ ಇರುವುದರಿಂದ ನೀನು ಸಂತೋಷಿಸಬಹುದು. ಪರಿಸ್ಥಿತಿಗಳಿಂದ ಕೆಲವು ವೇಳೆ ನೀನು ಸಂತೋಷಿಸುತ್ತಿ. ಆದರೆ ಕೆಲವು ವೇಳೆ ನೀನು ನಿರೀಕ್ಷೆಯಲ್ಲೂ ಸಂತೋಷಿಸುವುದಕ್ಕೆ ಸಮಯವಿದೆ. ಮಕ್ಕಳ ಹುಟ್ಟಿದ ಹಬ್ಬ ಸಮೀಪವಾದಂತೆ ಅವರು ಎಷ್ಟು ಉದ್ರೇಕಗೊಂಡಿರುತ್ತಾರೆ ಎಂದು ಚಿಕ್ಕ ಮಕ್ಕಳಿರುವವರಿಗೆ ಗೊತ್ತಾಗುತ್ತದೆ! ನನ್ನ ಮಗಳಾದ ರೂತ್ ಇತ್ತೀಚಿನ ದಿನಗಳಲ್ಲಿ ತನ್ನ ‘‘ಹುಟ್ಟಿದ ಹಬ್ಬವನ್ನು ಆಚರಿಸಿಕೊಂಡಾಗ, ಅವಳು ಹುಟ್ಟಿದ ಹಬ್ಬದ ಹಿಂದಿನ ವಾರದಿಂದಲೇ ಅದಕ್ಕಾಗಿ ಎದುರು ನೋಡುತ್ತಿದ್ದರು ಅವಳು ‘‘ಅಪ್ಪಾ ನಾಳೆ ಬೆಳಗ್ಗೆ ನಾನು ಎದ್ದಾಗ, ನೀನು ಹುಟ್ಟಿದ ಹಬ್ಬದ ಹುಡುಗಿಯೇ ಶುಭ ಮುಂಜಾನೆ’’ ಎಂದು ಹೇಳಬೇಕು, ಎಂದು ಅವಳು ನನಗೆ ಹೇಳಿದಳು. ನಾಳೆ ನಾನು ನನ್ನ ಹುಟ್ಟು ಹಬ್ಬವನ್ನು ಆಚರಿಸುತ್ತೇನೆ ಅನ್ನುವ ವಿಷಯ ‘‘ಈಗ’’ ಅವಳಿಗೆ ಸಂತೋಷ ತಂದಿತು. ಅದು ಇನ್ನೂ ಅವಳ ಹುಟ್ಟು ಹಬ್ಬವಾಗಿರಲಿಲ್ಲದಿದ್ದಾಗ್ಯೂ ಅವಳಿಗಿದ್ದ ನಿರೀಕ್ಷೆಯಿಂದ ಅವಳು ಸಂತೋಷದಿಂದ ಇದ್ದಳು. ಕ್ರಿಸ್ತೀಯರಾದ ನಾವು ನಿರೀಕ್ಷೆಯಲ್ಲಿ ಸಂತೋಷಿಸುತ್ತೇವೆ. ದೇವರು ನಮ್ಮ ವಿಷಯಗಳನ್ನು ತಲೆಕೆಳಗೆ ಮಾಡುತ್ತಾನೆಂತಲೂ ಮತ್ತು ನಮ್ಮ

ಪರಿಸ್ಥಿತಿಗಳನ್ನು ಬದಲಾಯಿಸುತ್ತಾನೆಂತಲೂ ನಾವು ಸಂತೋಷಿಸುತ್ತೇವೆ. ನಾನು ನಿರೀಕ್ಷೆಯಲ್ಲಿ ಸಂತೋಷಿಸುತ್ತೇನೆ.

**''ನಿರೀಕ್ಷೆಯ ಮೂಲನಾದ ದೇವರು ನಂಬಿಕೆಯಿಂದುಂಟಾಗುವ ಸಂತೋಷವನ್ನೂ, ಮನಶ್ಶಾಂತಿಯನ್ನೂ ನಿಮಗೆ ಪರಿಪೂರ್ಣವಾಗಿ ದಯಪಾಲಿಸಿ ನೀವು ಪವಿತ್ರಾತ್ಮನ ಬಲಗೂಡಿದವರಾಗಿ ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದುವಂತೆ ಅನುಗ್ರಹಿಸಲಿ''** (ರೋಮಾಪುರ 15:13).

**''ಕ್ರೈಸ್ತರು ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರಿ. ಉಪದ್ರವದಲ್ಲಿ ಸೈರಣೆಯುಳ್ಳವರಾಗಿರಿ. ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ''** (ರೋಮಾಪುರ 12:12).

ನಾವು ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದಬಹುದು ಮತ್ತು ನಿರೀಕ್ಷೆಯ ದೇವರು ನಮ್ಮನ್ನು ಸಂತೋಷ ಮತ್ತು ಶಾಂತಿಯಿಂದ ತುಂಬುವನು. ನಾವು ನಂಬುವಾಗ ಸಂತೋಷ ಮತ್ತು ಸಮಾಧಾನ ನಮ್ಮ ಜೀವದೊಳಗೆ ಬರುತ್ತದೆ. ಕಾಯುವಿಕೆಯು ಬಹಳ ಉದ್ದವಾದಾಗ ಕೆಲವೊಮ್ಮೆ ಜನರು ದೂರುವುದಕ್ಕೂ ಮತ್ತು ಗೊಣಗುಟ್ಟುವುದಕ್ಕೂ ಪ್ರಾರಂಭಿಸುತ್ತಾರೆ. ಅವರು ಏನು ಮಾಡಬೇಕೆಂದರೆ, ನಿರೀಕ್ಷೆಯನ್ನು ತಮ್ಮಲ್ಲಿ ಚಿತ್ರಿಸಿಕೊಳ್ಳಬೇಕು. ಈಗಿನ ಸಮಸ್ಯೆಗಳಿಂದ ಉದ್ರೇಕಗೊಳ್ಳುವ ಬದಲು ನಿರೀಕ್ಷೆಯ ಚಿತ್ರವನ್ನು ಕಾಪಾಡಿಕೊಳ್ಳಬೇಕು. ಒಂದು ದಿನ ಆ ಚಿತ್ರ ಸತ್ಯಸ್ಥಿತಿಗೆ ಬರುತ್ತದೆಂದು ತಿಳಿದು, ನಿನಗೆ ಸಂತೋಷ ಮತ್ತು ಸಮಾಧಾನ ಇರುತ್ತದೆ.

**''ನನ್ನ ಮನವೇ ನೀನು ಕುಗ್ಗಿಹೋಗಿರುವುದೇನು? ಹೀಗೆ ವ್ಯಥೆ ಪಡುವುದೇಕೆ? ದೇವರನ್ನು ನಿರೀಕ್ಷಿಸು ಆತನೇ ನನಗೆ ರಕ್ಷಕನೂ ದೇವರೂ ಆಗಿದ್ದಾನೆ. ನಾನು ಇನ್ನೂ ಆತನನ್ನು ಸ್ತುತಿಸುವೆನು''** (ಕೀರ್ತನೆ 42:5).

**''ನಾನಂತೂ ನಿರೀಕ್ಷಿಸಿಕೊಂಡೇ ಇರುವೆನು. ನಿನ್ನನ್ನು ಅಧಿಕಾಧಿಕವಾಗಿ ಹೊಗಳುತ್ತಿರುವೆನು''** (ಕೀರ್ತನೆ 71: 14).

ಒಬ್ಬರಿಗೆ ನಿರೀಕ್ಷೆ ಇರುವುದಾದರೆ ಸಂತೋಷವೂ ಮತ್ತು ದೇವರನ್ನು ಸ್ತುತಿಸುವ ಜ್ಞಾನದ ಸಾಮರ್ಥ್ಯವೂ ಇರುತ್ತದೆ. ನೀನು ಇದನ್ನು ಓದುತ್ತಿರುವಾಗಲೆ, ನಿರಾಶಾದಾಯಕ ಪರಿಸ್ಥಿತಿಗಳ ಮಧ್ಯದಲ್ಲಿ ನೀನು ಇರಬಹುದು ಮತ್ತು ''ನಾನು ಹೇಗೆ ಸಂತೋಷವಾಗಿರುವುದು?'' ಎಂದು ನೀನು ಹೇಳುತ್ತಿರಬಹುದು. ''ನಿರೀಕ್ಷೆಯಲ್ಲಿ ಸಂತೋಷಿಸು.'' ಎಂದು ಸತ್ಯವೇದ ಹೇಳುತ್ತದೆ. ಆದರೆ ನಾವು ಹೇಗೆ ದೇವರನ್ನು

ಸ್ತುತಿಸಬಹುದು. ಇಂದು ವಿಷಯಗಳು ಕೆಟ್ಟದಾಗಿ ತೋರಬಹುದು. ಇಂದಿನ ಪರಿಸ್ಥಿತಿಗಳು ಕಷ್ಟಕರವಾಗಿರಬಹುದು. ಆದರೆ ಈ ವಿಷಯಗಳು ಸದಾಕಾಲಕ್ಕೆ ಮುಂದುವರಿಯುವುದಿಲ್ಲ ಎಂದು ನೀನು ತಿಳಿದಿರುವುದರಿಂದ, ಇನ್ನೂ ನೀನು ಆತನನ್ನು ಸ್ತುತಿಸಬಹುದು. ಸತ್ಯವೇದದ ದೇವರು ನಿರಾಶಾದಾಯಕ ಸ್ಥಿತಿಗಳನ್ನು ಮಾರ್ಪಡಿಸುವ ದೇವರಾಗಿದ್ದಾನೆ ಮತ್ತು ದೇವರು ನಿನಗೆ ಅದನ್ನು ಮಾಡುತ್ತಾರೆ. ನಿನ್ನ ನಿರೀಕ್ಷೆಯನ್ನು ಸಜೀವವಾಗಿಟ್ಟುಕೋ. ನಿರೀಕ್ಷೆಯಲ್ಲಿ ನಂಬು.

ನಾವು ಹಾಡುತ್ತಿದ್ದ ಒಂದು ಹಾಡು ಇದೆ. ಈ ಹಾಡಿನ ಪದಗಳು ಬಹಳ ಉತ್ತೇಜನಕಾರಿಯಾಗಿದೆ.

## ದೇವರಿಗೆ ಸ್ತೋತ್ರ

*ನಿನ್ನ ಕನಸುಗಳನ್ನೆಲ್ಲಾ ಚದುರಿಸುವ*
*ಹೋರಾಟಗಳು ನಿನಗೆ ಎದುರಾದಾಗ*
*ನಿನ್ನ ನಿರೀಕ್ಷೆ ಎಲ್ಲಾ ಸೈತಾನನ*
*ಒಳಸಂಚುಗಳಿಂದ ಕ್ರೂರವಾಗಿ ತುಳಿಯಲ್ಪಡುವಾಗ*
*ಮತ್ತು ನಿನ್ನೊಳಗೆ ನೀನೇ*
*ಈ ಲೋಕದ ಭ್ರಮೆಗಳಿಗೆ*
*ಶರಣಾಗುವಂತೆ ಪ್ರೇರೇಪಿಸಲ್ಪಟ್ಟಾಗ*
*ನೀನು ನಿಂತಿರುವ ನಂಬಿಕೆಯು*
*ಕಾಣದೆ ಹೋಗುವಂತಿದ್ದರೂ ಬಿಡಬೇಡ*

(ಪಲ್ಲವಿ)

## ದೇವರಿಗೆ ಸ್ತೋತ್ರ

*ಸ್ತೋತ್ರ ಮಾಡುವವರ ಮೂಲಕ*
*ಆತನು ಕೆಲಸ ಮಾಡುವುದಕ್ಕೆ ಸಾಧ್ಯ*
*ದೇವರಿಗೆ ಸ್ತೋತ್ರ*
*ನಮ್ಮ ದೇವರು ಸ್ತುತಿಗಳ ಮಧ್ಯೆ ವಾಸಿಸುತ್ತಾನೆ*
*ದೇವರಿಗೆ ಸ್ತೋತ್ರ*

*ಸರಪಳಿಗಳು ನಿನ್ನನ್ನು ಬಂಧಿಸುವಂತೆ ಕಂಡರೂ*
*ನೀನು ಆತನನ್ನು ಸ್ತುತಿಸುವಾಗ*
*ಅವು ನಿರ್ಬಲವಾಗಿ ನಿನ್ನ ಹಿಂದೆ*
*ಬೀಳುತ್ತದೆ ಎಂಬುದನ್ನು ನೆನೆಸಿಕೊಳ್ಳುವುದಕ್ಕೆ ದುಡಿ*

*ಸೈತಾನನು ಸುಳ್ಳುಗಾರನು*
*ನಾವು ರಾಜನ ಮಕ್ಕಳೆಂದು*
*ಆತನಿಗೆ ಗೊತ್ತಿದ್ದರೂ*
*ನಾವು ದರಿದ್ರರು ಎಂದು*
*ತಿಳಿದುಕೊಳ್ಳಬೇಕೆಂದು ಅಂದುಕೊಳ್ಳುತ್ತಾನೆ*
*ಆದ್ದರಿಂದ ನಂಬಿಕೆ ಎನ್ನುವ*
*ಬಲವಾದ ಗುರಾಣೆಯನ್ನು ಎತ್ತಿ*
*ಯುದ್ಧ ಆಗಲೇ ಜಯವಾಗಿದೆ*
*ಯೇಸುವು ಆಗಲೇ ಎದ್ದಿದ್ದಾನೆಂದೂ*
*ಕೆಲಸವು ಮುಗಿದಿದೇ ಎಂದೂ*
*ನಮಗೆ ಗೊತ್ತಿದೆ*

ನೀನು ಈ ಪುಸ್ತಕವನ್ನು ಓದುತ್ತಾ ''ನಾನು ನಿರಾಶಾದಾಯಕ ಸ್ಥಿತಿಯಲ್ಲಿದ್ದೇನೆ'' ಎಂದು ಹೇಳುತ್ತಾ ಇರಬಹುದು. ಅದು ನಿನ್ನ ಮದುವೆ, ನಿನ್ನ ಮನೆ, ಮಕ್ಕಳು, ಹಣ, ಕೆಲಸ, ವೃತ್ತಿ ಅಥವಾ ವ್ಯಾಪಾರವಾಗಿರಬಹುದು - ಅದು ಜೀವನದಲ್ಲಿ ಏನಾದರಾಗಿರಬಹುದು. ನಾವೆಲ್ಲರೂ ಅಂಥಹ ಪರಿಸ್ಥಿತಿಗಳನ್ನು ಸಂಧಿಸುತ್ತೇವೆ. ''ನಿರೀಕ್ಷೆಯನ್ನು ಕಳೆದುಕೊಳ್ಳಬೇಡಿ'' ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ನಿರೀಕ್ಷೆಯನ್ನು ಕಳೆದುಕೊಳ್ಳದೆ ಇರುವುದು ಬಹಳ ಮುಖ್ಯವಾಗಿದೆ. ನೀನು ನಿರೀಕ್ಷೆಯನ್ನು ಕಳೆದುಕೊಳ್ಳುವಾಗ, ನಿನ್ನ ಒಳಗಿನ ಮನುಷ್ಯ ಬಲಹೀನವಾಗುತ್ತಾನೆ. ನೀನು ನಂಬಿಕೆಯನ್ನು ಕಳೆದುಕೊಳ್ಳೂವಾಗ ಲಂಗರು ಇಲ್ಲದ ಹಡಗಿನಂತೆ ನೀನು ಆಗುತ್ತಿ. ನೀನು ಮುಳುಗುವುದಕ್ಕೆ ಪ್ರಾರಂಭಿಸುತ್ತಿ. ನಿರೀಕ್ಷೆಯನ್ನು ನೀನು ಕಳೆದುಕೊಂಡಾಗ, ನಂಬಿಕೆಯನ್ನು ಪ್ರಯೋಗಿಸುವುದು ಬಹಳ ಕಷ್ಟವಾಗುತ್ತದೆ. ಏಕೆಂದರೆ ನಿರೀಕ್ಷೆ ಇಲ್ಲದೆ ನಂಬಿಕೆಯನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ.

ದೇವರಲ್ಲೂ ಮತ್ತು ಆತನ ವಾಕ್ಯದಲ್ಲೂ ನಿರೀಕ್ಷೆ ಇಡು. ದಿನ ಜೀವಿತವನ್ನು ಕುರಿತಾಗಿ ದೇವರು ಏನು ಮಾತನಾಡಿದ್ದಾರೆ ಎಂಬುದನ್ನು ಜ್ಞಾಪಕಪಡಿಸಿಕೊಳ್ಳಿರಿ. ನಿನ್ನ ಮನೆ ಮತ್ತು ಮದುವೆಯನ್ನು ಕುರಿತಾಗಿ ದೇವರು ಏನು ವಾಗ್ದಾನ ಮಾಡಿದ್ದಾರೆ? ನೀನು ಪಡೆದುಕೊಂಡ ವಾಗ್ದಾನಗಳನ್ನು ಹಿಡಿದುಕೋ, ನಿನ್ನ ನಿರೀಕ್ಷೆಗೆ ಆತನ ವಾಕ್ಯವನ್ನು ಉದ್ದೇಶವಾಗಿ ಮಾಡಿಕೊ, ದೇವರು ಹೇಳಿರುವುದರಿಂದ, ನಿನ್ನ ಸ್ಥಿತಿಗತಿಗಳು ಬದಲಾಗುತ್ತವೆ ಎಂಬ ನಿರೀಕ್ಷೆಯನ್ನು ನೀನು ಹೊಂದಿಕೊಂಡಿರಬಹುದು. ದೇವರ ವಾಗ್ದಾನಗಳು ನೆರವೇರಿದಾಗ, ಅದು ಹೇಗಿರಬಹುದು ಎಂಬ ಚಿತ್ರವನ್ನು ನಿನ್ನ ಮನಸ್ಸಿನಲ್ಲಿ ಇಟ್ಟುಕೋ. ನಿನ್ನ ನಿರೀಕ್ಷೆಯನ್ನು ಸಜೀವವಾಗಿಟ್ಟುಕೊಳ್ಳುವುದಕ್ಕೆ ಇದು ಸಹಾಯ ಮಾಡುತ್ತದೆ.

**''ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನು''** (ಎಫೆಸ 3:20).

- ದೇವರು ಏನನ್ನು ಮಾತನಾಡಿದ್ದಾರೋ ಅದರಂತೆಯೇ ನಾನು ಆಗುತ್ತೇನೆ ಎನ್ನುವ ನಿರೀಕ್ಷೆಯಲ್ಲಿ ನಂಬಿಕೆ ಇಡು.
- ನಿರಾಶಾದಾಯಕ ಸ್ಥಿತಿಯು ನಿನ್ನ ನಂಬಿಕೆಯನ್ನು ಜಡವಾಗಿಸುವುದಕ್ಕೆ ಬಿಡಬೇಡ.
- ದೃಢ ನಿರ್ಧಾರವನ್ನು ಮತ್ತು ತಾಳ್ಮೆಯನ್ನು ಪ್ರದರ್ಶಿಸು.
- ನಿನ್ನ ಸಂತೋಷವನ್ನು ಇಟ್ಟುಕೊಂಡು ದೇವರಿಗೆ ಸ್ತುತಿಯನ್ನು ಸಲ್ಲಿಸು.

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಿಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ  ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

''**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**'' (ಅಪೊಸ್ತಲರ ಕೃತ್ಯ 10:43)

''**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**'' (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಕೆಲವು ವೇಳೆ ನಮ್ಮ ಜೀವಿತ ನಾವು ನಿರೀಕ್ಷಿಸದ ತಿರುವನ್ನು ತೆಗೆದುಕೊಳ್ಳುತ್ತದೆ. ಇದ್ದಕ್ಕಿದ್ದ ಹಾಗೆ ಬಿರುಗಾಳಿಯ ಮಧ್ಯದಲ್ಲಿ ನಮ್ಮನ್ನು ನಾವೇ ಕಾಣಬಹುದು. ಒಂದು ಜೀವಿತದ ಮೂಲಕ ಹಾದು ಹೋಗುವಾಗ ನಮ್ಮೆಲ್ಲರಿಗೂ ಸವಾಲುಗಳು ಮತ್ತು ಹೋರಾಟಗಳು ಯಾವಾಗಲೂ ಇರುತ್ತವೆ. ಕೆಲವು ವೇಳೆ ಯಾವ ಕಡೆಗೂ ತಿರುಗಲು ಆಗದಂತ ರಸ್ತೆಯ ಕೊನೆಯಲ್ಲಿ ನಮ್ಮನ್ನು ನಾವೇ ಕಾಣಬಹುದು.

ನಿಮ್ಮ ಕೆಲಸ, ವೃತ್ತಿ ಜೀವನ, ವಿದ್ಯಾಭ್ಯಾಸ, ಮನೆ, ಮದುವೆ ಅಥವಾ ಕುಟುಂಬದಲ್ಲಿ ನೀವು ನಿರಾಶಾದಾಯಕ ಸ್ಥಿತಿಗಳ ಮಧ್ಯದಲ್ಲಿ ಇರಬಹುದು. ನಿನ್ನ ಜೀವನದಲ್ಲಿ ಅನೇಕ ವಿಷಯಗಳು ತಪ್ಪಾಗಿ ಹೋಗಿರಬಹುದು. ಆದರೆ ಜೀವವಿಲ್ಲದ ಮತ್ತು ನಿರಾಶೆಯ ಪರಿಸ್ಥಿತಿಗೆ ಮತ್ತು ಸನ್ನಿವೇಶಕ್ಕೆ ಸತ್ಯವೇದದ ದೇವರು ವಿಶೇಷವಾಗಿ ಸತ್ತಂತವುಗಳಿಗೆ ಜೀವ ಕೊಡುವಾತನು ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ನಿನ್ನ ನಿರಾಶಾದಾಯಕ ಪರಿಸ್ಥಿತಿಗಳನ್ನು ಸಂಪೂರ್ಣವಾಗಿ ಬದಲಾಯಿಸುವುದಕ್ಕೆ ಆತನು ಶಕ್ತನಾಗಿದ್ದಾನೆ. ಆತನು ನಿನ್ನೊಂದಿಗೆ ಇರುವಾಗ ನಿರೀಕ್ಷೆಯೇ ಇಲ್ಲದ ಸಮಯದಲ್ಲೂ ನೀನು ನಿರೀಕ್ಷಿಸಬಹುದು.

ಎಲ್ಲವೂ ನಿರಾಶಾದಾಯಕವಾಗಿ ಕಾಣುವಾಗಲೂ ನೀನು ಗೆದ್ದು ಬರಬಹುದು. ಈ ಪುಸ್ತಕವು ಸಾಧಾರಣವಾಗಿ ಪ್ರೋತ್ಸಾಹಿಸುವ ವಾಕ್ಯಗಳನ್ನು ತರುತ್ತವೆ ಮತ್ತು ನಾವು ನಿರೀಕ್ಷೆಯನ್ನು ಕಳೆದುಕೊಳ್ಳಬಾರದೆಂದು ಬೋಧಿಸುತ್ತದೆ. ದೇವರಲ್ಲೂ ಮತ್ತು ದೇವರ ವಾಕ್ಯದಲ್ಲೂ ನಿರೀಕ್ಷೆ ಇಡಿ. ದೇವರು ನಿನ್ನ ಜೀವನವನ್ನು ಕುರಿತಾಗಿ ಹೇಳಿರುವುದನ್ನು ನೆನಪಿಸಿಕೋ. ನಿರೀಕ್ಷೆಯನ್ನು ಕಳೆದುಕೊಳ್ಳಬೇಡ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org